ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಡಾ. ಹೆಚ್.ಸಿ. ಸತ್ಯನ್ -ವಿರುದ್ಧ ಕರ್ನಾಟಕ ರಾಜ್ಯ (ಪೊಲೀಸ್ ಇನ್ಸ್ಪೆಕ್ಟರ್), ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮೈಸೂರು)

ಕ್ರಿಮಿನಲ್ ಅರ್ಜಿ ಸಂ. 899/2017, ದಿನಾಂಕ 15 ನೇ ಜೂನ್, 2017.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ಕರ್ನಾಟಕ ಸರ್ಕಾರವು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13 ( 1) (   ಇ) ಮತ್ತು 13 ( 2) ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಅರ್ಜಿದಾರರ ವಿರುದ್ಧ ' ಮಂಜೂರಾತಿಯ ಸಿಂಧುತ್ವ'ದ ಸಂಬಂಧದಲ್ಲಿ ವಿಚಾರಣಾಧೀನ ನ್ಯಾಯಾಲಯ ವಿಶೇಷ ಮೊಕದ್ದಮೆ ಸಂ .74/2012 ರಲ್ಲಿ III ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಧೀಶರು, ಮೈಸೂರು ಇವರು ದಿನಾಂಕ 09.01.2017 ರಂದು ಹೊರಡಿಸಿದ ಆದೇಶವನ್ನು ವಜಾಗೊಳಿಸುವಂತೆ ಕೋರಿ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ದಾಖಲಿಸಿರುವರು.

2. ವಿವಾದವಾಗದಿರುವ ಸಂಗತಿಗಳು ಹೀಗಿದೆ:

ಅರ್ಜಿದಾರ ವ್ಯಕ್ತಿಯು ಲೋಕ ನೌಕರನಾಗಿರುವ (ಸರ್ಕಾರಿ ನೌಕರ) ಸಕಲೇಶಪುರದ ಮೋಟಾರು ವಾಹನದ ಇನ್ಸ್ಪೆಕ್ಟರ್, ಆರ್ಟಿಓ ಅಧಿಕಾರಿಯಾಗಿರುವರು.ಪ್ರತಿವಾದಿ ಕರ್ನಾಟಕ ಲೋಕಾಯುಕ್ತ ಪೊಲೀಸು, ಮೈಸೂರು ವಿಶೇಷ ನ್ಯಾಯಾಲಯದ ಮುಂದೆ ಮೇಲೆ ಹೇಳಲಾದ ಅಪರಾಧಕ್ಕಾಗಿ ಅರ್ಜಿದಾರನ ವಿರುದ್ಧ 22.09.2012 ರಂದು ವಿವರವಾದ ವಿಚಾರಣೆ ನಡೆಸಿದ ನಂತರ ಆರೋಪ ಪಟ್ಟಿಯನ್ನು ಸಲ್ಲಿಸಿದೆ.ಅರ್ಜಿದಾರರು ಪ್ರಾಥಮಿಕ ಹಂತದಲ್ಲಿಯೇ ವಿಚಾರಣಾಧೀನ ನ್ಯಾಯಾಲಯದ ವಿವಾದಿತ ವ್ಯವಹರಣೆಯನ್ನು ಪ್ರಶ್ನಿಸಿರುವರು, ಅಸಿಂಧುವಾದ ದೋಷಾರೋಪವನ್ನು ಮುಂದುವರೆಸಿದ್ದಕ್ಕೆ ಒಪ್ಪಿಕೊಂಡ ಮಂಜೂರಾತಿಯ ಕಾರಣದ ಮೇಲೆ ನ್ಯಾಯಾಲಯವು ಸಂಜ್ಞಾನಕ್ಕೆ ತಂದುಕೊಳ್ಳಬೇಕೆಂದು ಅರ್ಜಿದಾರರು ಪ್ರಶ್ನಿಸಿರುವರು.ಅರ್ಜಿದಾರರು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 19 ( 4) ನೇ ಅಡಿಯಲ್ಲಿ ನೀಡಿರುವ ಸದರಿ ಮಂಜೂರಾತಿ ಆದೇಶವನ್ನು ಪ್ರಶ್ನಿಸಿ ವಿಚಾರಣಾಧೀನ ನ್ಯಾಯಾಲಯದ ಮುಂದೆ ಅರ್ಜಿಯನ್ನು ದಾಖಲಿಸಿರುವರು.ಸದರಿ ಅರ್ಜಿಯನ್ನು ವಿಚಾರಣಾಧೀನ ನ್ಯಾಯಾಲಯವು ತಿರಸ್ಕರಿಸಿದೆ.ಪರಿಣಾಮವಾಗಿ, ಅರ್ಜಿದಾರ ಸದರಿ ಆದೇಶವನ್ನು ಪ್ರಶ್ನಿಸಿ ಈ ನ್ಯಾಯಾಲಯದ ಮುಂದೆ ಕ್ರಿಮಿನಲ್ ಅರ್ಜಿ ಸಂ .7554/2015 ಅನ್ನು ದಾಖಲಿಸಿದನು.ಈ ನ್ಯಾಯಾಲಯ ದಿನಾಂಕ 03.02.2016 ರಂದು ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದೆ ಮತ್ತು ವಿಚಾರಣಾಧೀನ ನ್ಯಾಯಾಲಯಕ್ಕೆ ಈ ವಿಷಯದ ಸಂಬಂಧದಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಮಾಡಿದೆ ಮತ್ತು ಮೊಕದ್ದಮೆಯನ್ನು ವಿಚಾರಣಾಧೀನ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಿದೆ.ಈ ನ್ಯಾಯಾಲಯನ್ನ ಆದೇಶದ 5 ನೇ ಪ್ಯಾರಾಗ್ರಾಫ್ನಲ್ಲಿ ಮಾಡಿದ ಅಭಿಪ್ರಾಯೋಕ್ತಿಯು ಈ ಮುಂದಿನಂತಿದೆ:

“ xXXX ಅದು, ನ್ಯಾಯಾಲಯಕ್ಕಾಗಿ ಸಾಕ್ಷ್ಯಗಳ ಆರೋಪಗಳನ್ನು ಮತ್ತು ದಾಖಲೆಗಳನ್ನು ರೂಪಿಸುವುದಕ್ಕೆ ಅಗತ್ಯ ಪಡಿಸುತ್ತದೆ.ಮೊದಲು ಮಂಜೂರಾತಿ ಸಿಂಧುತ್ವದ ಬಗೆಗಿನ ಸಾಕ್ಷ್ಯವನ್ನು ಮುಂದಿಡುವುದಕ್ಕೆ ಮತ್ತು

ತದನಂತರದಲ್ಲಿ ಇತರ ಸಾಕ್ಷಿದಾರರ ವಿಚಾರಣೆಯನ್ನು ನಡೆಸುವುದು ಅಪೇಕ್ಷಣೀಯವಾದದು.ಒಪ್ಪಿತ ಮಂಜೂರಾತಿಗೆ ಹೊಣೆಗಾರರು ಯಾರು ಎಂಬುದನ್ನು, ಶಿಸ್ತು ಪ್ರಾಧಿಕಾರದ ಅಥವಾ ಇತರ ಸಾಕ್ಷಿದಾರರ ಸಾಕ್ಷ್ಯಗಳನ್ನು ಅಭಿ ಲೇಖಿಸಿದ ತರುವಾಯ, ಅಗ ತ್ಯವಿದ್ದಲ್ಲಿ ಕಾನೂನಿಗನುಸಾರವಾಗಿ ಮಂಜೂರಾತಿ ಸಿಂಧುತ್ವದ ಬಗೆಗಿನ ನಿರ್ಣಯವನ್ನು ಮಾನ್ಯ ವಿಶೇಷ ನ್ಯಾಯಾಧೀಶರು ನಿರ್ಣಯಿಸಬಹುದು."

3. ಈ ನ್ಯಾಯಾಲಯದಿಂದ ಸದರಿ ನಿರ್ದೇಶನವನ್ನು ಜಾರಿ ಮಾಡಿದ ನಂತರ, ಪ್ರಾಸಿಕ್ಯೂಷನ್ ಸಾಕ್ಷ್ಯಗಳ ವಿಚಾರಣೆಯನ್ನು ಮಾಡಿದೆ, ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ರಾಮಚಂದ್ರು ಅವರನ್ನು ಪ್ರಾ.ಸಾ .1 ಆಗಿ ವಿಚಾರಣೆ ಮಾಡಲಾಗಿದೆ.ಎರಡೂ ಪಕ್ಷಕಾರರ ಅಹವಾಲನ್ನು ಆಲಿಸಿದ ಮತ್ತು ಅಭಿಲೇಖಿಸಿದ ಸುಸಂಗತ ದಾಖಲೆಗಳನ್ನು ಅವಲೋಕಿಸಿದ ನಂತರ, ವಿಶೇಷ ನ್ಯಾಯಾಲಯ ಸಕ್ಷಮ ಪ್ರಾಧಿಕಾರ ಅಂದರೆ ರಾಜ್ಯ ಸರ್ಕಾರವು ಅರ್ಜಿದಾರನನ್ನು ಒಪ್ಪಲಾದ ಮಂಜೂರಾತಿಯ ಸಂಬಂಧದಲ್ಲಿ ವಿಚಾರಣೆ ಮಾಡುವುದಕ್ಕೆ ಪ್ರಶ್ನಿತ ಆದೇಶವನ್ನು ಪುನಃ ಹೊರಡಿಸಿದೆ ಮತ್ತು ಮಂಜೂರಾತಿ ಆದೇಶವನ್ನು ಹೊರಡಿಸುವ ಮುಂಚೆ ಯುಕ್ತ ಪ್ರಾಧಿಕಾರವು ಯುಕ್ತವಾದ ವಿವೇಚನೆಯನ್ನು ಮಾಡಿದೆಯೆಂದು ಹೇಳಿದೆ.ಸದರಿ ಆದೇಶದಿಂದ ಬಾಧಿತನಾದ ಅರ್ಜಿದಾರನು, ಈ ನ್ಯಾಯಾಲಯದಲ್ಲಿ ಮತ್ತೆ ವಿವಿಧ ಕಾರಣಗಳ ಮೇಲೆ ಈ ನ್ಯಾಯಾಲಯದ ಮುಂದೆ ಸದರಿ ಆದೇಶವನ್ನು ಪ್ರಶ್ನಿಸಿರುವನು.

4. ಮಾನ್ಯ ನ್ಯಾಯವಾದಿಯಾದ ಶ್ರೀ ಎಸ್.ಜಿ. ಭಗವಾನ್ ಅವರು ಈ ನ್ಯಾಯಾಲಯದ ಮುಂದೆ ಪೂರಕ ಆಧಾರಗಳನ್ನು ನೀಡಿ ವಾದವನ್ನು ನಿವೇದಿಸಿರುವರು, ಮಂಜೂರಾತಿ ಆದೇಶವನ್ನು ಹೊರಡಿಸುವಲ್ಲಿ ಕರ್ನಾಟಕ ಸರ್ಕಾರದ ಸಕ್ಷಮತೆಯ ಸಂಬಂಧದಲ್ಲಿನ ವಾದಾಂಶವನ್ನು ಮಂಡಿಸಿ, ಸರ್ಕಾರವು ಹೊರಡಿಸಿದ ಆದೇಶಕ್ಕೆ ಸಾಧ್ಯವಾದಷ್ಟು ಆಕ್ಷೇಪಣೆಗಳು ಬಂದಿಲ್ಲದ ಕಾರಣ ಈ ವಾದಾಂಶಕ್ಕೆ ಹೆಚ್ಚಿನ ಒತ್ತನ್ನು ನೀಡುವ ಅವಶ್ಯಕತೆ ಇಲ್ಲವೆಂದು ನಿವೇದಿಸಿರುವರು.

5. ರಾಜ್ಯ ಸರ್ಕಾರ ಅರ್ಜಿದಾರನನ್ನು ಅವನ ಹುದ್ದೆಯಿಂದ ತೆಗೆದು ಹಾಕುವುದಕ್ಕೆ ಸಕ್ಷಮ ಪ್ರಾಧಿಕಾರವಾಗಿದೆ.ಆದುದರಿಂದ ಮಂಜೂರಾತಿ ಆದೇಶ ಹೊರಡಿಸುವುದಕ್ಕೆ ಸರ್ಕಾರವೇ ಸಕ್ಷಮ ಪ್ರಾಧಿಕಾರವಾಗಿದೆ.ಆದರೆ, ಈ ನ್ಯಾಯಾಲಯದ ಮುಂದೆ ಮಾನ್ಯ ನ್ಯಾಯವಾದಿಗಳು ಎತ್ತಿರುವ ಪ್ರಶ್ನೆ ಏನೆಂದರೆ ಮಂಜೂರಾತಿ ಆದೇಶವನ್ನು ಹೊರಡಿಸುವುದಕ್ಕಾಗಿ ರಾಜ್ಯಪಾಲರ ಮುಂದಾಗಲೀ ಅಥವಾ ಸಂಪುಟದ ಮುಂದಾಗಲೀ ವಸ್ತು ವಿಷಯವನ್ನು ಮಂಡಿಸಬೇಕಾಗುತ್ತದೆ ಎಂಬುದಾಗಿದೆ.ನ್ಯಾಯವಾದಿಗಳು, ವಾದವನ್ನು ಮುಂದುವರೆಸಿ, ಎಲ್ಲ ಮಂಜೂರಾತಿ ವಿಷಯಗಳನ್ನು ಅಂಥ ಆದೇಶವನ್ನು ಹೊರಡಿಸುವುದಕ್ಕಾಗಿ ನಿರ್ಣಯವನ್ನು ತೆಗೆದುಕೊಳ್ಳುವುದನ್ನು ಸಂಪುಟ ಮತ್ತು " ಸಚಿವ ಸಂಪುಟ'ದ ಮುಂದೆ ಮಂಡಿಸತಕ್ಕದ್ದು ಎಂದು ಸರ್ಕಾರವು ಪರಿಭಾಷಿಸಿದೆ.ಈ ಮೊಕದ್ದಮೆಯಲ್ಲಿ, ಒಪ್ಪಲಾದ ಮಂಜೂರಾತಿಯ ಸಂಬಂಧದಲ್ಲಿ ಸಂಪುಟವಾಗಲಿ ಯಾವುದೇ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ ಅಥವಾ ರಾಜ್ಯಪಾಲರಾಗಲೀ ಮಂಜೂರಾತಿ ವಿಷಯವನ್ನು ಪರಿಶೀಲಿಸಿರುವುದಿಲ್ಲ.ಸದರಿ ಕಾರಣದ ಮೇಲೆ ಮಾನ್ಯ ನ್ಯಾಯವಾದಿಗಳು ಈ ಬಗ್ಗೆ ಪ್ರಾರಂಭಿಕ ಹಂತದಲ್ಲಿಯೇ ಒತ್ತಿ ಹೇಳಿರುವ ಅಂಶವಾಗಿದೆ, ಅಷ್ಟೇ ಅಲ್ಲದೆ ಅವರು ಈ ನ್ಯಾಯಾಲಯದ ಮುಂದೆ ಸಾಧ್ಯವಾದಷ್ಟರ ಮಟ್ಟಿಗೆ ಸಂಬಂಧಪಟ್ಟ ಎರಡನೇ ಪ್ರಮುಖ ಅಂಶದ ಬಗ್ಗೆ ತೀವ್ರತರವಾಗಿ ವಾದವನ್ನು ಮಂಡಿಸಿರುವರು, ಸಾರಿಗೆ ಸಚಿವರು ಅರ್ಜಿದಾರನ ವಿರುದ್ಧ ಮಂಜೂರಾತಿಯ ಆದೇಶವನ್ನು ಹೊರಡಿಸುವ ಅಗತ್ಯತೆಗೆ ಸಂಬಂಧಪಟ್ಟಂತೆ ತಮ್ಮ ವಿವೇಚನೆಯನ್ನು ಬಳಸದೆ ಮತ್ತು ದಾಖಲೆಗಳನ್ನು

ಪರಿಶೀಲಿಸಿ ಹಾಗೂ ತಮಗೆ ಸಮ್ಮತವಾಗಿದೆಯೆಂದು ಮಂಜೂರಾತಿ ಆದೇಶವನ್ನು ಮಂಡಿಸಿದ್ದಾರೆಂದು ನಿವೇದಿಸಿದ್ದಾರೆ.

6. ಮಾನ್ಯ ನ್ಯಾಯವಾದಿಗಳು ಮಂಜೂರಾತಿ ಆದೇಶವನ್ನು ಹೊರಡಿಸುವಲ್ಲಿ ಸಂಬಂಧಪಟ್ಟ ಸಚಿವರೇ ಸಕ್ಷಮರಾಗಿರುತ್ತಾರೆಯೇ ಹೊರತು ಸರ್ಕಾರವು ಸಕ್ಷಮತೆಯ ಬಗ್ಗೆ ಅಷ್ಟಾಗಿ ಒತ್ತು ನೀಡಿರುವುದಿಲ್ಲ ಎಂದು ವಾದವನ್ನು ಮಂಡಿಸಿ ವಿಚಾರಣಾಧೀನ ನ್ಯಾಯಾಲಯ ಅದನ್ನು ತುಂಬಾ ಗಂಭೀರವಾಗಿಯೇ ಗಮನಕ್ಕೆ ತಂದುಕೊಂಡಿದೆ ಮತ್ತು 10 ರಿಂದ 12 ನೇ ಪ್ಯಾರಾಗ್ರಾಫ್ನಲ್ಲಿ ನೀಡಲಾದ ಯುಕ್ತ ಕಾರಣಗಳ ವಿವರಗಳನ್ನು ಸಹ ಅದು ಪರಿಗಣನೆಗೆ ತಂದುಕೊಂಡಿದೆ ಮತ್ತು ಮಂಜೂರಾತಿ ಆದೇಶವನ್ನು ಹೊರಡಿಸುವುದಕ್ಕೆ ಸಂಬಂಧಪಟ್ಟ ಸಚಿವರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ ಎಂಬುದು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರ ಅಡಿಯಲ್ಲಿ ನಿರ್ಣಿತವಾದ ಸುಸಂಗತ ಉಪಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ.

7. ಮೇಲಿನ ಸದರಿ ಉಪಬಂಧಗಳನ್ನು ನಾನು ತುಂಬಾ ಜಾಗರೂಕತೆಯಿಂದ ಅವಲೋಕಿಸಿರುತ್ತೇನೆ.ಭಾರತ ಸಂವಿಧಾನದ 166 ನೇ ಅನುಚ್ಛೇದದಲ್ಲಿ ಎಲ್ಲ ರಾಜ್ಯ ಸರ್ಕಾರದ ಆದೇಶಗಳನ್ನು ರಾಜ್ಯಪಾಲರ ಹೆಸರಿನಲ್ಲಿಯೇ ಮಾಡತಕ್ಕದ್ದು ಎಂದು ಉಪಬಂಧಿಸಿದೆ.ಆದುದರಿಂದ ಸರ್ಕಾರದ ಹೆಸರಿನಲ್ಲಿ ಹೊರಡಿಸಬೇಕಾದ ಯಾವುದೇ ಆದೇಶವನ್ನು ಭಾರತ ಸಂವಿಧಾನದ 166 ನೇ ಅನುಚ್ಛೇದ ಅಡಿಯಲ್ಲಿ ಉಪಬಂಧಿಸಿದಂತೆ ರಾಜ್ಯಪಾಲರ ಹೆಸರಿನಿಂದಲೇ ಅವುಗಳನ್ನು ಹೊರಡಿಸತಕ್ಕದ್ದು ಹಾಗೆಂದು, ಸರ್ಕಾರದ ಎಲ್ಲ ಆದೇಶಗಳನ್ನು ರಾಜ್ಯಪಾಲರು ಅವಲೋಕಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು ಎಂದು ಅರ್ಥೈಸಿಕೊಳ್ಳತಕ್ಕದ್ದಲ್ಲ.

8. ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರಲ್ಲಿ ಮೂರು ಅನುಸೂಚಿಗಳಿವೆ, ಅದರಲ್ಲಿನ ಮೊದಲನೆ ಅನುಸೂಚಿಯಲ್ಲಿ ನಿರ್ದಿಷ್ಟ ನಿಯಮಗಳನ್ನು, ವಿಷಯಗಳ ವಿಶಿಷ್ಟ ಸಂಯತೆಯನ್ನು, ನಿರ್ಣಯಕ್ಕಾಗಿ ಸಂಪುಟದ ಮುಂದೆ ಅಗತ್ಯವಾಗಿ ಮಂಡಿಸಬೇಕಾದಂತಹ ಆ ಯಾವುದೇ ವಿಷಯಗಳನ್ನು ಒಳಗೊಂಡಿದೆ.ಎರಡನೇ ಅನುಸೂಚಿಯು ಮುಖ್ಯ ಮಂತ್ರಿಯ ಮುಂದೆ ಮಂಡಿಸುವ ಆ ಯಾವುದೇ ವಸ್ತುವಿಷಯಗಳ ಉಲ್ಲೇಖಗಳನ್ನು ಒಳಗೊಂಡಿದೆ.ಕೊನೆಯದಾಗಿ ಎಂದರೆ ಮೂರನೇ ಅನುಸೂಚಿಯು, ರಾಜ್ಯಪಾಲರ ನಿರ್ಣಯಕ್ಕಾಗಿ ನಿವೇದಿಸಬೇಕಾದ ಆ ಯಾವುದೇ ವಸ್ತುವಿಷಯದ ಉಲ್ಲೇಖಗಳನ್ನು ಒಳಗೊಂಡಿದೆ.ವಿಚಾರಣಾಧೀನ ನ್ಯಾಯಾಲಯ, ಮೇಲಿನ ಅನುಸೂಚಿಗಳನ್ನು ತುಂಬಾ ಜಾಗರೂಕವಾಗಿ ಅವಲೋಕಿಸಿ ಮಾಡಿದ ಅಭಿಪ್ರಾಯೋಕ್ತಿಯೂ ಹೀಗಿದೆ, ಈ ಅನುಸೂಚಿಗಳ ವ್ಯಾಪ್ತಿಗೆ ಸರ್ಕಾರಿ ನೌಕರನ ಒಪ್ಪಲಾದ ಮಂಜೂರಾತಿಯ ವಿಷಯಕ್ಕೊಳಪಟ್ಟ ವ್ಯವಹರಣೆಗಳು ಒಳಪಡುವುದಿಲ್ಲ ಎಂದು ಸ್ಪಷ್ಟವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.ವಿಚಾರಣಾಧೀನ ನ್ಯಾಯಾಲಯ ಸಂಪುಟಕ್ಕೆ ಮತ್ತು ಮುಖ್ಯಮಂತ್ರಿಗೆ ಮತ್ತು ರಾಜ್ಯಪಾಲರಿಗೆ ಉಲ್ಲೇಖಿಸುವಂತಹ ಆ ಯಾವುದೇ ವಿಷಯಗಳನ್ನು ಸಹ ಪರಾಮರ್ಶಿಸಿದೆ ಮತ್ತು ಅದು, ಕೊನೆಯದಾಗಿ ಸದರಿ ಮೂರು ಅನುಸೂಚಿಗಳ ವ್ಯಾಪ್ತಿಯೊಳಗೆ ಈ ಒಪ್ಪಲಾದ ಮಂಜೂರಾತಿ ಆದೇಶವು ಒಳಪಡುವುದಿಲ್ಲ ಎಂದು ನಿರ್ಣಯಿಸಿದೆ.ಆಗಿದ್ದರೂ ಈ ನ್ಯಾಯಾಲಯದ ಮುಂದೆ, ಮಾನ್ಯ ನ್ಯಾಯವಾದಿಗಳು ಅನ್ವಯವಾಗುವ ಸರ್ಕಾರಿ ನೌಕರನಿಗೆ ಒಪ್ಪಲಾದ ಮಂಜೂರಾತಿ ಆದೇಶದ ಅಧಿಕಾರ ವ್ಯಾಪ್ತಿಗೆ ಸದರಿ ಮೇಲಿನ ಅನುಸೂಚಿಗಳ ಅಡಿಯಲ್ಲಿ ನಿಯಮಗಳನ್ನು ನನ್ನ ಗಮನಕ್ಕೆ ತಂದಿರುವುದಿಲ್ಲ.ಆದುದರಿಂದ, ಈ ಸಂಬಂಧದಲ್ಲಿ ವಿಚಾರಣಾಧೀನ ನ್ಯಾಯಾಧೀಶರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ವಿಭಿನ್ನವಾಗಿ ನನಗೆ ಇಲ್ಲಿ ಯಾವುದೇ ಸಮರ್ಥವಾದ ಕಾರಣಗಳು ಕಂಡುಬಂದಿರುವುದಿಲ್ಲ.

9. ವಿಚಾರಣಾಧೀನ ನ್ಯಾಯಾಲಯವು ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರಲ್ಲಿ ನಿರ್ದಿಷ್ಟವಾಗಿ 30 ( 1) ನೇ ನಿಯಮವನ್ನು ಪರಿಗಣಿಸಿದೆ.ನಾನು ಸಹ ಅದನ್ನು ಪರಾಮರ್ಶಿಸಿದ್ದೇನೆ.ಈ ನಿಯಮವು ಸಂಬಂಧಪಟ್ಟ ಇಲಾಖೆಯ ಪ್ರಭಾರವನ್ನು ಹೊಂದಿರುವ ಸಚಿವ ಅಥವಾ ರಾಜ್ಯ ಸಚಿವ ಅಥವಾ ಉಪ ಸಚಿವರುಗಳ ಸಂದರ್ಭದಲ್ಲಿನ ಆದೇಶಕ್ಕಾಗಿ ನಿರ್ದಿಷ್ಟ ಇಲಾಖೆಯ ಕಾರ್ಯದರ್ಶಿಯವರು ವಿಷಯವನ್ನು ಮಂಡಿಸುವುದನ್ನು 30 ( 1) ನೇ ನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದೆ.ಸದರಿ ನಿಯಮಗಳ 30 ( 2) ನೇ ನಿಯಮವು, ಸಚಿವರ ಮುಂದೆ ವಿಷಯವನ್ನು ಮಂಡಿಸದೆ ಇಲಾಖೆಯ ಕಾರ್ಯದರ್ಶಿಯವರು ತಮ್ಮ ಹಂತದಲ್ಲಿಯೇ ವಿಷಯವನ್ನು ವಿಲೇ ಮಾಡುವ ಸಂದರ್ಭದಲ್ಲಿ ಇಲಾಖೆಯ ಕಾರ್ಯದರ್ಶಿಯವರೇ ಸ್ವತಃ ಹೊಣೆಗಾರರಾಗಿರುವ ವ್ಯವಹರಣೆಗಳ ಬಗ್ಗೆ ಉಪಬಂಧಿಸಿದೆ.ಆದುದರಿಂದ, ಈ ವಿಷಯವು 1 ರಿಂದ 3 ನೇ ಅನುಸೂಚಿಯ ವ್ಯಾಪ್ತಿಯೊಳಗೆ ಒಳಪಡುವುದಿಲ್ಲ ಎಂದು ಹೇಳಲು ಬರುವುದಿಲ್ಲ, ವಸ್ತುವಿಷಯದ ಸ್ವರೂಪ ಮತ್ತು ಪ್ರಾಧಾನ್ಯತೆಯ ಮೇಲೆ ಸಂಬಂಧಪಟ್ಟ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಸಚಿವರು ಇವರೆಲ್ಲರು ಇಲಾಖೆಗೆ ಸಂಬಂಧಪಟ್ಟ ವಿಷಯಗಳನ್ನು ನಿರ್ವಹಿಸುವ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

10. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಅರ್ಜಿದಾರ/ಅಪಾದಿತನು ಹಿರಿಯ ಮೋಟಾರು ವಾಹನ ಪರಿಶೀಲಕನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯಾಗಿದ್ದಾನೆ.ಆದುದರಿಂದ, ಈ ವಿಷಯವು ಸಾರಿಗೆ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದೆ.ಮೇಲೆ ಹೇಳಲಾದ ಉಪಬಂಧದ ಅಡಿಯಲ್ಲಿ, ಸಾರಿಗೆ ಸಚಿವರು ಸಾರಿಗೆ ಇಲಾಖೆಯ ಅತ್ಯುನ್ನತ ಪ್ರಾಧಿಕಾರಿಯಾಗಿರುತ್ತಾರೆ.ಹಾಗಾಗಿ, ಅರ್ಜಿದಾರರ ಮೇಲೆ ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಿಯಾಗಿರುವ ಸಚಿವರು ಮಂಜೂರಾತಿಯನ್ನು ನೀಡಿರುತ್ತಾರೆ.ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಒಪ್ಪಿತವಾದಂತೆ ಸಾರಿಗೆ ಸಚಿವರು ಮಂಜೂರಾತಿ ಆದೇಶವನ್ನು ಅನುಮೋದಿಸಿರುವರು.ತದನಂತರದಲ್ಲಿ ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಅಧೀನ ಕಾರ್ಯದರ್ಶಿಯವರು ಅದನ್ನು ಹೊರಡಿಸಿರುತ್ತಾರೆ.ಪ್ರಾ.ಸಾ .1 ಆಗಿರುವ ಸರ್ಕಾರದ ಅಧೀನ ಕಾರ್ಯದರ್ಶಿಯವರನ್ನು ಸ್ವತಃ ಮಂಜೂರಾತಿ ಪ್ರಾಧಿಕಾರಿಯೆಂದು ಹೇಳಲು ಬರುವುದಿಲ್ಲ. ಅಂತಿಮವಾಗಿ, ಒಪ್ಪಲಾದ ಮಂಜೂರಾತಿಗೆ ಆಪಾದಿತನ ಮೇಲೆ ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶಕ್ಕೆ ಸಚಿವರು ಒಪ್ಪಿಗೆ ನೀಡಿ ಅನುಮೋದಿಸಿರುವರು.ಆಪಾದಿತನ ಮೇಲೆ ಕ್ರಮ ಜರುಗಿಸುವುದಕ್ಕೆ ರಾಜ್ಯ ಸರ್ಕಾರದ ಪರವಾಗಿ ಒಪ್ಪಿದ ಮಂಜೂರಾತಿಗೆ ಸಕ್ಷಮ ಪ್ರಾಧಿಕಾರಿ ಸಾರಿಗೆ ಸಚಿವರಾಗಿರುವ ಅಂಶವು ಸಾಧ್ಯವಾದಷ್ಟು ಮಟ್ಟಿಗೆ ಪರಾಪ್ತವಾಗಿದೆ.ಆದುದರಿಂದ ನನಗೆ ಇಲ್ಲಿ, ಸರ್ಕಾರದ ಪರವಾಗಿ ಒಪ್ಪಲಾದ ಮಂಜೂರಾತಿಗೆ ಸಾರಿಗೆ ಸಚಿವರು ಸಕ್ಷಮ ಪ್ರಾಧಿಕಾರಿಯಾಗಿರುವರು ಎಂಬ ವಿಚಾರಣಾಧೀನ ನ್ಯಾಯಾಲಯ ನಿರ್ಣಯದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಸಮರ್ಥ ಕಾರಣಗಳು ಕಂಡುಬಂದಿಲ್ಲ.

11. ಈ ನ್ಯಾಯಾಲಯದ ಮುಂದೆ ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್.ಜಿ. ಭಗವಾನ್ ಅವರು ತೀವ್ರತರವಾಗಿ ಮತ್ತು ಒತ್ತಾಯಪೂರ್ವಕವಾಗಿ ವಾದವನ್ನು ಮಂಡಿಸಿರುವರು, ಅತಿಜಾಗರೂಕತೆಯಿಂದ ಮಂಡಿಸಿದ ವಾದದಲ್ಲಿ ವಿಚಾರಣೆಯ ಕಾಲಾವಧಿಯಲ್ಲಿ ತನಿಖಾ ಏಜೆನ್ಸಿಯೂ ಸಂಗ್ರಹಿಸಿದ ವಸ್ತುಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಕೋರಿಕೆಯನ್ನು ಸರಿಯಾಗಿ ಗಮನಕ್ಕೆ ತೆಗೆದುಕೊಳ್ಳದೇ ಯಾಂತ್ರಿಕವಾಗಿ ಮಂಜೂರು ಆದೇಶವನ್ನು ಸಕ್ಷಮ ಪ್ರಾಧಿಕಾರವು ಹೊರಡಿಸಿದೆ ಎಂದು ತುಂಬಾ ಭಾವೋದ್ವೇಗದಿಂದ ನಿವೇದಿಸಿರುವರು.ಮುಂದುವರೆದು ವಿಚಾರಣಾಧೀನ ನ್ಯಾಯಾಲಯ ಈ

ಅಂಶದ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸಿಲ್ಲ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಈ ದೃಷ್ಟಿಕೋನದಿಂದ ಪರಿಗಣಿಸಲು ಯಾವುದೇ ಕಾರಣವನ್ನು ಯುಕ್ತವಾಗಿ ನೀಡಿಲ್ಲ ಮತ್ತು ಪ್ರಾಥಮಿಕ ಹಂತದಲ್ಲಿಯೇ ನಿವೇದಿಸಿದ ಎಲ್ಲ ವಾದಗಳನ್ನು ವಿಚಾರಣಾಧೀನ ನ್ಯಾಯಾಲಯವು ತಳ್ಳಿಹಾಕಿದೆ ಎಂದು ನಿವೇದಿಸಿರುವರು.ಆದುದರಿಂದ, ಈಗಲಾದರೂ ಈ ಈ ನ್ಯಾಯಾಲಯವು ನ್ಯಾಯಾಲಯವು ಈ ಈ ದೃಷ್ಟಿಕೋನದಲ್ಲಿ ಸಾಕ್ಷ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ಮಂಜೂರಾತಿ ಆದೇಶದ ಸಂದರ್ಭದಲ್ಲಿ ಕಾನೂನಿಗನುಸಾರವಾಗಿರುವ ಸಂಗತಿಗಳನ್ನು ಮತ್ತು ತನಿಖೆಯ ಕಾಲಾವಧಿಯಲ್ಲಿ ಸಂಗ್ರಹಿಸಲಾದ ವಸ್ತುಗಳನ್ನು ಮತ್ತು ಸಾಕ್ಷಿಗಳನ್ನು ಸರಿಯಾಗಿ ಮನವರಿಕೆ ಮಾಡಿಕೊಂಡ ತರುವಾಯ ಮತ್ತು ಮೇಲ್ನೋಟಕ್ಕೆ ಕಂಡುಬರುವ ಸಂಗತಿಗಳ ಸಂಬಂಧದಲ್ಲಿ ಸ್ವತಃ ಮನವರಿಕೆ ಮಾಡಿಕೊಂಡ ತರುವಾಯವಷ್ಟೆ ಅಂಥ ಆದೇಶ ಹೊರಡಿಸುವುದು ಅವಶ್ಯವಾಗಿದೆಯೆಂದು ನಿವೇದಿಸಿದ್ದಾರೆ.

12. ಈ ಎಲ್ಲ ಹಿನ್ನೆಲೆಯಲ್ಲಿ, ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮೇಲಿನ ವಾದವನ್ನು ಮಂಡಿಸುವಾಗ ನಿದರ್ಶನ ಪೂರ್ವಕವಾಗಿ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿರುವರು ಅವುಗಳು ಈ ಕೆಳಗಿನಂತಿದೆ.

ಮನಸುಖಿಲಾಲ್ ವಿಠಲ್ದಾಸ್ ಚೌವ್ಹಾಣ್ -ವಿರುದ್ಧ-ಗುಜರಾತ್ ರಾಜ್ಯ ಎಐಆರ್ 1997 ಎಸ್ಸಿ 3400 ಮೊಕದ್ದಮೆಯಲ್ಲಿ ಘನವೆತ್ತ ಸರ್ವೋಚ್ಚ ನ್ಯಾಯಾಲಯ ವ್ಯಕ್ತಪಡಿಸಿದ ಚ ಅಭಿಪ್ರಾಯೋಕ್ತಿಗಳು ಕೆಳಗಿನಂತಿದೆ:

" ಮಂಜೂರಾತಿ " ಯ ಸಿಂಧುತ್ವ ಎಂದರೆ, ತನಿಖೆಯ ಕಾಲಾವಧಿಯಲ್ಲಿ ಸಂಗ್ರಹಿಸಲಾದ ವಸ್ತುಗಳು ಮತ್ತು ಸಾಕ್ಷ್ಯಗಳ ಸಂದರ್ಭದಲ್ಲಿ ಸಂಗತಿಗಳನ್ನ ಸಹ ಮಂಜೂರಾತಿ ಪ್ರಾಧಿಕಾರ ಗಮನಕ್ಕೆ ತಂದುಕೊಂಡ ಅನ್ವಯ ಸಾಧ್ಯತೆಗಳ ಮೇಲೆ ಸಿಂಧುತ್ವವು ಆಧಾರಿತವಾಗಿರುತ್ತದೆ.ಮಂಜೂರಾತಿ ಪ್ರಾಧಿಕಾರ ಮಂಜೂರಾತಿ ನೀಡಲು ಅಥವಾ ಮಂಜೂರಾತಿ ನೀಡದಿರುವ ಸಂಬಂಧದಲ್ಲಿ ಕ್ರಮ ಜರುಗಿಸಲು ಅದಕ್ಕೆ ವಸ್ತುನಿಷ್ಠವಾಗಿ ಮನವರಿಕೆಯ ಸೃಜನೆಗಾಗಿ ಅದು ಸ್ವತಃ ಸ್ವತಂತ್ರವಾಗಿ ತನ್ನ ಮನಸ್ಥಿತಿಯನ್ನು ಅನ್ವಯಮಾಡಿಕೊಳ್ಳುವುದು ಅವಶ್ಯಕವಾಗಿದೆ.ಮಂಜೂರಾತಿ ಪ್ರಾಧಿಕಾರ ಒಂದು ರೀತಿಯ ಅಥವಾ ಇತರ ರೀತಿಯ ನಿರ್ಣಯ ತೆಗೆದುಕೊಳ್ಳುವುದಕ್ಕೆ ಯಾವುದೇ ಮೂಲದಿಂದ ಅಥವಾ ಯಾವುದೇ ಬಾಹ್ಯ ಒತ್ತಡಕ್ಕೆ ಒಳಗಾಗಿ ಅದು ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದಲ್ಲ.ಮಂಜೂರಾತಿ ಪ್ರಾಧಿಕಾರದಲ್ಲಿ ಮಂಜೂರಾತಿ ನೀಡಿಕೆ ಅಥವಾ ಮಂಜೂರಾತಿ ನೀಡದಿರುವ ವಿವೇಚನಾಧಿಕಾರವು ಅದರಲ್ಲಿ ನಿರುಪಾಧಿಕವಾಗಿ ನಿಹಿತಗೊಂಡಿದೆ.ಪರಿಗಣಿತ ಯಾವುದೇ ಅಪ್ರಸ್ತುತ ಅ ೦ ಶಗಳು ಅದರ ವಿವೇಚನಾಧಿಕಾರವನ್ನು ಬಾದಿತಗೊಳಿಸಬಾರದು.ಮಂಜೂರಾತಿ ಪ್ರಾಧಿಕಾರ ಮಂಜೂರಾತಿ ನೀಡಿಕೆಗೆ ಇತರ ಆ ಯಾವುದೇ ಕಾರಣಗಳಿಗಾಗಿ ಅಥವಾ ಆ ಯಾವುದೇ ಹೊಣೆಗಾರಿಕೆಯ ಅಡಿಯಲ್ಲಿ ಅಥವಾ ಯಾವುದೇ ಒತ್ತಾಯಪೂರ್ವಕ ಅಥವಾ ಆ ಯಾವುದೇ ಅನಿವಾರತೆಯ ಅಂಶಗಳಿಂದ ಅದು ತನ್ನ ಸ್ವತಂತ್ರ ವಿವೇಚನೆಯನ್ನು ಅನ್ವಯಿಸುವುದಕ್ಕೆ ಸಾಧ್ಯವಾಗದಿರುವುದನ್ನು ಅದು ತೋರಿಸುತ್ತದೆ.ಈ ಕಾರಣದಿಂದ ತಪ್ಪಾದ ಆದೇಶಗಳು ಬರುತ್ತವೆ.ಇಂತಹ ಆ ಯಾವುದೇ ಅನಿವಾದ್ಯತೆ, ಒತ್ತಾಯದ ಸಂದರ್ಭದಲ್ಲಿ ಮಂಜೂರಾತಿ ಪ್ರಾಧಿಕಾರವು " ಮಂಜೂರಾತಿ ನೀಡಿಕೆ ಸಾಧ್ಯವಿಲ್ಲ " ಎಂಬ ವಿವೇಚಾನಾಧಿಕಾರವನ್ನು ಬಳಸಬೇಕೆ ಮತ್ತು ಮಂಜೂರಾತಿ ನಿರ್ವಹಣೆಯನ್ನು ಯಾಂತ್ರಿಕವಾಗಿ ಅದು ಪರಾಮರ್ಶಿಸಬೇಕಾಗುತ್ತದೆ.

ಮತ್ತೊಂದು ಮೊಕದ್ದಮೆಯಾದ ನಂಜಪ್ಪ ವಿರುದ್ಧ ಕರ್ನಾಟಕ ರಾಜ್ಯ ಘನವೆತ್ತ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯೋಕ್ತಿಗಳು ಹೀಗಿದೆ

66 ಉಚ್ಚ ನ್ಯಾಯಾಲಯ ಅಥವಾ ಪುನರೀಕ್ಷಣಾ ಅಥವಾ ಚ ...... ಅಪೀಲು ನ್ಯಾಯಾಲಯ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 19 ನೇ ಪ್ರಕರಣವನ್ನು ಗಮನಕ್ಕೆ ತಂದುಕೊಂಡು ಮಂಜೂರಾತಿ ಆದೇಶವನ್ನು ಪರಿಶೀಲಿಸತಕ್ಕದ್ದು.ಮಂಜೂರಾತಿ ಆದೇಶದಲ್ಲಿ ಯಾವುದೇ ದೋಷ, ಲೋಪ ಅಥವಾ ಅಕ್ರಮತೆಯ ಆಧಾರದ ಮೇಲೆ ವಿಶೇಷ ನ್ಯಾಯಾಧೀಶರು 19 ( 1) ( 3) ನೇ ಪ್ರಕರಣದ ಮೂಲಸಾರಕ್ಕೆ ವಿರುದ್ಧವಾಗಿ ಬಂದ ಪ್ರತಿಕೂಲ ಆದೇಶವನ್ನು ಉನ್ನತ ನ್ಯಾಯಾಲಯ ನಿಷೇಧಿಸಬಹುದಾಗಿದೆ.( 3) ಮತ್ತು ( 4) ನೇ ಉಪಪಕರಣದಲ್ಲಿ ಬಳಸಲಾದ ಅಭಿವ್ಯಕ್ತಿಯಿಂದ ಅದು ಸುಸ್ಪಷ್ಟವಾಗಿ ಪರಾಪ್ತವಾಗಿದೆ.ಅದಕ್ಕನುಸಾರವಾಗಿ ಅಪೀಲು ಅಥವಾ ಪುನರೀಕ್ಷಣಾ ನ್ಯಾಯಾಲಯದಲ್ಲಿನ ನ್ಯಾಯದ ವಿಫಲತೆಯ ಸಂದರ್ಭದಲ್ಲಿ ಮ ಂ ಜೂರಾತಿಯಲ್ಲಿನ ದೋಷ ಅಥವಾ ತಪ್ಪು ಅಥವಾ ಅಕ್ರಮತೆಯನ್ನು ಮುಂಚಿನ ಹಂತದಲ್ಲಿಯೇ ಸಂಬಂಧಪಟ್ಟ ಸಂಗತಿಗಳಲ್ಲಿ ಉದ್ಭವಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು.ಪರಾಪ್ತವಾಗಿ ಹೇಳಬೇಕಾದದು ಎಂದರೆ, ( 3) ಮತ್ತು ( 4) ನೇ ಉಪಪ್ರಕರಣಗಳನ್ನು ಸಂಯೋಜಿತವಾಗಿ ಓದಿಕೊಂಡು, ಯಾವುದೇ ಸಂದೇಹಕ್ಕೆ ಆಸ್ಪದಕೊಡದೆ, ಸದರಿ ಉಪಬಂಧಕ್ಕೆ ಒತ್ತು ನೀಡಿ ವಿಶೇಷ ನ್ಯಾಯಾಧೀಶರು ಹೊರಡಿಸಿದ ಆದೇಶದಲ್ಲಿನ ಒಳಗೊಂಡ ಪರಿಣಾಮಗಳು, ಅಭಿಪ್ರಾಯೋಕ್ತಿಗಳು ಮಂಜೂರಾತಿ ಆದೇಶದ ಸಿಂಧುತ್ವಕ್ಕೆ ಅಥವಾ ಸಿಂಧುತ್ವದ ವ್ಯವಹರಣೆಗಳನ್ನು ಪ್ರಶ್ನಿಸಿದೆ.

ಈ ಮೇಲಿನ ನಿರ್ಣಯಗಳಂದು ಅದು ಸ್ಪಷ್ಟವಾಗುತ್ತದೆ, ಅಪೀಲು ನ್ಯಾಯಾಲಯ ಅಥವಾ ಪುನರೀಕ್ಷಣಾ ನ್ಯಾಯಾಲಯ ಅಥವಾ ಉನ್ನತ ನ್ಯಾಯಾಲಯಗಳು ಮಂಜೂರಾತಿ ಆದೇಶಕ್ಕೆ ಉಲ್ಲೇಖಿತ ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ಹಸ್ತಕ್ಷೇಪಮಾಡಲು ಇಚ್ಛಿಸಿದರೆ, ಅವುಗಳು ನ್ಯಾಯದ ವಿಫಲತೆಯ ಬಗ್ಗೆ ಕಾರಣಗಳನ್ನು ನೀಡಬೇಕಾಗುತ್ತದೆ.ಆದುದರಿಂದ, ಆದೇಶವನ್ನು ಹಸ್ತಕ್ಷೇಪ ಮಾಡಬೇಕಾದರೆ ಯುಕ್ತ ನ್ಯಾಯನಿರ್ವಹಣೆ ಮಾಡಬೇಕಿದೆ.

13. ಮತ್ತೊಂದು ಅವಲಂಬನೆಯಾಗಿ ನೀಡಿದ ಮೊಕದ್ದಮೆಯ ಸಿಬಿಐ – ವಿರುದ್ಧ-ಅಶೋಕ್ ಕುಮಾರ್ ಅಗರ್ವಾಲ್ ನಡುವಿನ ಮೊಕದ್ದಮೆಯನ್ನು ಇಬ್ಬರೂ ಪಕ್ಷಕಾರರ ದೃಷ್ಟಿಯಿಂದ ಪರಾಮರ್ಶಿಸಲಾಗಿದೆ.ಅದರ ಅಭಿವ್ಯಕ್ತಿಗಳು ಹೀಗಿದೆ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 19 ನೇ ಪ್ರಕರಣದ ಅಡಿಯಲ್ಲಿ, ಮಂಜೂರಾತಿ ಪ್ರಾಧಿಕಾರ ತನ್ನ ಮುಂದೆ ಮಂಡಿಸಲಾದ ಎಲ್ಲಾ ದಾಖಲೆಗಳನ್ನು ಸಂಪೂರ್ಣವಾಗಿ ಮತ್ತು ತುಂಬಾ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿದೆ.ಮಂಜೂರು ಆದೇಶದಲ್ಲಿ ಪ್ರಾಧಿಕಾರವು ಪರಿಗಣಿಸಿದ ಎಲ್ಲಾ ಸುಸಂಗತ ಸಂಗತಿಗಳನ್ನು ಮತ್ತು ತಾನು ಮನವರಿಕೆ ಮಾಡಿಕೊಂಡ ಅಂಶಗಳೆಲ್ಲವನ್ನು ಸ್ಪಷ್ಟವಾಗಿ ದಾಖಲಿಸಬೇಕು.ಪ್ರಾಸಿಕ್ಯೂಷನ್ ಮಂಜೂರಾತಿ ಪ್ರಾಧಿಕಾರದ ಮುಂದೆ ಇಡೀ ದಾಖಲೆಯನ್ನು ಮಂಡಿಸತಕ್ಕದ್ದು ಮತ್ತು ತನ್ನ ಗಮನವನ್ನು ಸರಿಯಾಗಿ ಅನ್ವಯಿಸಿಕೊಂಡು ಪ್ರಾಧಿಕಾರವು ಕ್ರಮ ಜರುಗಿಸಿರುವುದನ್ನು ನ್ಯಾಯಾಲಯ ಮನದಟ್ಟು ಮಾಡಿಕೊಳ್ಳುವುದು.ಅಂಥ ಅಧಿಕಾರವನ್ನು ಯಾರೇ ವ್ಯಕ್ತಿಗೆ ನಿಯೋಜಿಸಬಾರದು.

14. ಈ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ, ವರದಿಯಾಗಿರುವ ಬಿ.ಎಸ್. ಯಡ್ಯೂರಪ್ಪ ವಿರುದ್ಧ ಘನವೆತ್ತ ಕರ್ನಾಟಕದ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ 2016 ( 1) ಕೆಸಿಸಿಆರ್ 645  ಮೊಕದ್ದಮೆಯಲ್ಲಿ ವಿಭಾಗೀಯ ಪೀಠದ ಅಭಿಪ್ರಾಯೋಕ್ತಿಗಳು ಹೀಗಿದೆ:

" ಕ್ರಮ ಜರುಗಿಸುವುದಕ್ಕೆ ಮಂಜೂರಾತಿಯ ಸಿಂಧುತ್ವವನ್ನು ಯಾವುದೇ ಹಂತದಲ್ಲಿಯೂ ಪ್ರಶ್ನಿಸಬಹುದಾಗಿದೆ.ಆದರೆ ಅದನ್ನು ಆದ ಷ್ಟು ಮು ಂ ಚಿನ ಹ ಂ ತದಲ್ಲಿ ಪ್ರಶ್ನಿಸುವುದು ಅ ಅಪೇಕ್ಷಣೀಯವಾಗಿದೆ.ಇಲ್ಲಿ ಎಸಗಬಹುದಾದ ಅಪರಾಧದ ಸ್ವರೂಪದ ಪ್ರಶ್ನೆಯು ಉದ್ಭವವಾಗುವುದಿಲ್ಲ, ಆದರೆ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರನು ಎಸಗಿದ ಕೃತ್ಯವು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 19 ನೇ ಪ್ರಕರಣದ ಅಡಿಯಲ್ಲಿ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 197 ನೇ ಪ್ರಕರಣದ ಅಡಿಯಲ್ಲಿನ ಉಪಬಂಧದ ಅನುಸಾರ ಸರ್ಕಾರಿ ನೌಕರನು ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಅಪರಾಧದ ಕೃತ್ಯವಾಗಿದೆಯೇ ಎಂಬ ಪ್ರಶ್ನೆಯಾಗುತ್ತದೆ.ಇಲ್ಲಿ ಸರ್ಕಾರಿ ನೌಕರನು ಎಸಗಿದ ಆರೋಪಿತ ಅಪರಾಧದ ಆರೋಪಿ ಎಂದು ಅಧಿಕೃತವಾಗಿ ತೋರಿಸಬೇಕಾಗುತ್ತದೆ.ಅಭಿಲೇಖಿಸಿದ ವಸ್ತುವಿಷಯದ ಆಧಾರದ ಮೇಲೆ ಸುಸಂಗತ ಪರಿಗಣನೆಗಳನ್ನು ಯುಕ್ತವಾಗಿ ಗಮನಕ್ಕೆ ತಂದುಕೊಳ್ಳದೆ ಅದು ಮಂಜೂರಾತಿ ಆದೇಶವನ್ನು ಹೊರಡಿಸಿದರೆ, ಅದು ಸುಸ್ಥಾಪಿತ ಕಾನೂನಿನ ತತ್ವಗಳ ಅನುಸಾರವಾಗಿ ಇರುವುದಿಲ್ಲ."

15. ಮೇಲಿನ ಸದರಿ ವಾದಗಳಿಗೆ ಪ್ರತಿಯಾಗಿ ಪ್ರತ್ಯರ್ಜಿದಾರರ ಪರವಾಗಿ ಶ್ರೀ ವೆಂಕಟೇಶ್ ಎಸ್. ಅರಭಟ್ಟಿಯವರು ಈ ನ್ಯಾಯಾಲಯದ ಮುಂದೆ ಗಂಭೀರವಾದ ವಾದವನ್ನು ಮಂಡಿಸಿರುವರು, ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಮೇಲೆ ಉಲ್ಲೇಖಿಸಿದ ಸದರಿ ಮೊಕದ್ದಮೆಗಳಲ್ಲಿ ಹೇಳಲಾದ ಸದರಿ ತತ್ವಗಳನ್ನು ಬಹಳ ಕಟ್ಟುನಿಟ್ಟಾಗಿ ಅನುಸರಿಸಲಾಗಿದೆಯೆಂದು ನಿವೇದಿಸಿರುವರು.ಮಂಜೂರಾತಿ ಪ್ರಾಧಿಕಾರ ಎಲ್ಲ ಅಧಿಕೃತ ಪರಿಶೀಲನೆಯನ್ನು ಮಾಡಿದ ತರುವಾಯ ಆ ಎಲ್ಲಾ ಕಾಗದ ಪತ್ರಗಳು ತೃಪ್ತಿದಾಯಕವಾಗಿದೆ ಎಂದು ಮನದಟ್ಟು ಆದ ತರುವಾಯ ತದನುಸಾರವಾಗಿ ಆರೋಪಿಯ ಮೇಲೆ ಕ್ರಮ ಜರುಗಿಸುವುದಕ್ಕೆ ಮಂಜೂರಾತಿ ನೀಡಲಾಗಿದೆ ಎಂದು ವಾದದಲ್ಲಿ ನಿವೇದಿಸಿರುವರು.

16. ಪ್ರತ್ಯರ್ಜಿದಾರ ಪರವಾಗಿ ಮಾನ್ಯ ನ್ಯಾಯವಾದಿಗಳು, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 19 ( 3) ಮತ್ತು ( 4) ನೇ ಪ್ರಕರಣದ ಅಡಿಯಲ್ಲಿ ಉಪಬಂಧಗಳ ಅಡಿಯಲ್ಲಿ ಉದ್ದೇಶಿತ ನ್ಯಾಯ ವಿಫಲತೆಯ ಸಂಬಂಧದಲ್ಲಿ ವಿವಿಧ ನಿರ್ಣಿತ ನಿರ್ಣಯಗಳನ್ನು ಆಧಾರವಾಗಿ ನಿವೇದಿಸಿರುವರು.ಮಧ್ಯ ಪ್ರದೇಶ ರಾಜ್ಯ ವಿರುದ್ಧ ಶ್ರೀ ರಾಮ್ ಸಿಂಗ್ ಮತ್ತು ಮೊತ್ತೊಂದು ಮೊಕದ್ದಮೆಯಾದ ಬಿಹಾರ ರಾಜ್ಯ -ವಿರುದ್ಧ ರಾಜ್ಮಂಗಳ ರಾಮ್ ಮೊಕದ್ದಮೆಯಲ್ಲಿ ಘನವೆತ್ತ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯದಲ್ಲಿ ಅಭಿಪ್ರಾಯೋಕ್ತಿಗಳು ಈ ಮುಂದಿನಂತಿದೆ:

" ಕಾನೂನು ಇಲಾಖೆಯೂ ಸಕ್ಷಮವಾಗಿರುವುದಿಲ್ಲವೆಂದು ಭಾವಿಸಿಕೊಂಡರೂ ನ್ಯಾಯದ ವಿಫಲತೆಯ ನಿರ್ಣಯವನ್ನು ಉಚ್ಚ ನ್ಯಾಯಾಲಯದಲ್ಲಿ ದಾಖಲಿಸುವುದಕ್ಕೆ ಇದು ಅತ್ಯಂತ ಅವಶ್ಯಕವಾಗಿರುತ್ತದೆ.ಆದುದರಿಂದ, ಮಂಜೂರಾತಿ ನೀಡಿಕೆಯಲ್ಲಿ ತಪ್ಪು ಅಥವಾ ಅಕ್ರಮತೆಯ ಕಾರಣದಿ ಂ ದ ನ್ಯಾಯದ ವಿಫಲತೆಯಾಗಿದೆ ಎಂದು ವಾದ ಮಾಡುವುದು ಮತ್ತು ರುಜುವಾತುಪಡಿಸುವುದು ಅತ್ಯಗತ್ಯವಾಗಿದೆ.

ನ್ಯಾಯದ ವಿಫಲತೆಯು ಸಂಭವಿಸಿದಿದ್ದ ಹೊರತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣವನ್ನು ಅನ್ವಯಿಸಿಕೊಳ್ಳುವ ಮೂಲಕ ಉಚ್ಚ ನ್ಯಾಯಾಲಯದಿಂದ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರತಿಬ ಂ ಧಿಸತಕ್ಕದ್ದಲ್ಲ.

17. ಮಾನ್ಯ ನ್ಯಾಯವಾದಿಗಳು ಸಿ.ಎಸ್. ಕೃಷ್ಣಮೂರ್ತಿ -ವಿರುದ್ಧ ಕರ್ನಾಟಕ ರಾಜ್ಯ ' ಮೊಕದ್ದಮೆಯ ನಿರ್ಣಯವನ್ನು ಆಧಾರವಾಗಿ ಉಲ್ಲೇಖಿಸಿರುವರು, ನಿರ್ಣಯದ ಅಭಿಪ್ರಾಯೋಕ್ತಿಗಳು ಹೀಗಿದೆ

" ಮಂಜೂರಾತಿ ಆದೇಶ ಸ್ವತಃ ವ್ಯಕ್ತವಾಗಿರಬೇಕು, ಒಂದುವೇಳೆ ಸಂಗತಿಗಳು ಕಂಡುಬಂದಿರುವ ಸಂದರ್ಭದಲ್ಲಿ, ಅದು ಯುಕ್ತ ಪರಿಶೀಲನೆಗಾಗಿ ಮಂಜೂರಾತಿ ಪ್ರಾಧಿಕಾರದ ಮುಂದೆ ಮಂಡಿಸಲಾದ ಎಲ್ಲಾ ದಾಖಲೆಪತ್ರಗಳು ಸಾಕ್ಷ್ಯವನ್ನು ರುಜುವಾತುಪಡಿಸತಕ್ಕದ್ದು ಎಂದು ಮಂಜೂರಾತಿ ಆದೇಶವು ಹೇಳುತ್ತದೆ.ಒಂದು ವೇಳೆ, ಮಂಜೂರಾತಿ ಆದೇಶವು ಸ್ಪಷ್ಟವಾಗಿದ್ದಲ್ಲಿ ಮಂಜೂರಾತಿ ಪ್ರಾಧಿಕಾರವು, ಮೇಲ್ನೋಟದ ಆದೇಶವನ್ನು ಓದುವ ಮೂಲಕ ತಾನು ಮನದಟ್ಟು ಮಾಡಿಕೊಳ್ಳತಕ್ಕದ್ದು.

18. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಮಾನ್ಯ ನ್ಯಾಯವಾದಿಗಳು ನಿವೇದಿಸಿದ ವಾದಾಂಶದಲ್ಲಿ, ಸರ್ಕಾರವು ಸ್ವತಃ ಮಂಜೂರಾತಿ ಆದೇಶವನ್ನು ಹೊರಡಿಸಿದೆ ಇದು ಮಂಜೂರಾತಿ ಪ್ರಾಧಿಕಾರವು ಸುಸ್ಥಾಪಿಸುವುದಕ್ಕೆ ಪರ್ಯಾಪ್ತವಾಗಿದೆ ಅದು ಅದನ್ನು ಗಮನದಲ್ಲಿಟ್ಟುಕೊಂಡು ಅನ್ವಯಿಸಿಕೊಂಡಿದೆ ಮತ್ತು ತದನಂತರದಲ್ಲಿ ಮಂಜೂರಾತಿಗೆ ಒಪ್ಪಿಗೆ ನೀಡಿದೆ ಎಂದು ನಿವೇದಿಸಿರುವರು.

19. ಮಧ್ಯಪ್ರದೇಶ ರಾಜ್ಯ ವಿರುದ್ಧ ಪಿ.ವಿ. ಜಿಯಲಾಲ್ ಮೊಕದ್ದಮೆಯಲ್ಲಿ ಮತ್ತು ಅಶೋಕ ಏಶೇರಿಂಗ್ ಭುಟೀಯ -ವಿರುದ್ಧ-ಸಿಕ್ಕಿಂ ರಾಜ್ಯ ಮೊಕದ್ದಮೆಯಲ್ಲಿ ಘನವೆತ್ತ ಸರ್ವೋಚ್ಚ ನ್ಯಾಯಾಲಯ ನೀಡಿದ ಎರಡು ತೀರ್ಪುಗಳ ಆಧಾರವಾಗಿ ಚ ಉಲ್ಲೇಖಿಸಿರುವರು.ಈ ಮೊಕದ್ದಮೆಗಳಲ್ಲಿ ಎರಡು ನಿರ್ಣಯಗಳ ಅಭಿಪ್ರಾಯೋಕ್ತಿಗಳು ಹೀಗಿದೆ

" ಮಂಜೂರಾತಿ ಪ್ರಾಧಿಕಾರ ಹೊರಡಿಸಿದ ಮಂಜೂರಾತಿ ಆದೇಶವನ್ನು ಅದರಲ್ಲೂ ಕ್ರಮಜರುಗಿಸಲು ಸಾಕ್ಷಿಯಾಗಿ ಪರಿಶೀಲಿಸುವ ಅಗತ್ಯ ಇರುವುದಿಲ್ಲ.ದೈನಂದಿನ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗಲೇ ಮ ಂ ಜೂರಾತಿ ಆದೇಶವನ್ನು ಹೊರಡಿಸಲಾಗಿದೆ ಎಂಬುದು ಸ್ಪಷ್ಟವಾಗಿರುತ್ತದೆ.ಮಂಜೂರಾತಿ ಆದೇಶವನ್ನು ನೈಜರೀತಿಯಲ್ಲಿ ಮಾಡಲಾಗಿದೆ ಎ ಂ ದು ಭಾವಿಸಬೇಕಾಗಿದೆ.ನ್ಯಾಯವಿಫಲತೆಯ ಗಂಭೀರ ಪರಿಣಾಮದ ಹೊರತು ಕ್ರಮಜರುಗಿಸುವ ಮೊಕದ್ದಮೆಗೆ ತನಿಖೆಯ ಮತ್ತು ಮ ಂ ಜೂರಾತಿಯಲ್ಲಿ ದೋಷವು ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ."

20. ಮೇಲೆ ಹೇಳಲಾದ ನಿರ್ಣಯವನ್ನು ಸಮಗ್ರವಾಗಿ ಅರ್ಥೈಸಿಕೊಳ್ಳಬೇಕಾದರೆ ಈ ಮುಂದಿನ ತತ್ವಗಳನ್ನು ಮನದಟ್ಟು ಮಾಡಿಕೊಳ್ಳಬೇಕಿದೆ:

1) ಸರ್ಕಾರಿ ನೌಕರನನ್ನು ವಿಚಾರಣೆ ಮಾಡುವುದಕ್ಕೆ ಮಂಜೂರಾತಿ ಪ್ರಾಧಿಕಾರವು ಮಂಜೂರಾತಿಯನ್ನು ಒಪ್ಪಿದ್ದಲ್ಲಿ ಅಥವಾ ಮಂಜೂರಾತಿಯನ್ನು ನಿರಾಕರಿಸಿದ್ದಲ್ಲಿ, ಅದನ್ನು ಗಮನಕ್ಕೆ ತಂದುಕೊಳ್ಳತಕ್ಕದ್ದು, ಅದು ಪರಾಮರ್ಶಿಸಲು ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಎಲ್ಲಾ ದಸ್ತಾವೇಜು ಪತ್ರಗಳನ್ನು ಸಿದ್ಧಪಡಿಸುವುದು ತನಿಖಾ ಏಜೆನ್ಸಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದೆಲ್ಲವು ಮಂಜೂರಾತಿ ಪ್ರಾಧಿ ಕಾರ ಕ್ಕೆ ತೃಪ್ತಿಕರವಾಗಿರತಕ್ಕದ್ದು.

ii) ತನಿಖಾ ಏಜೆನ್ಸಿಯೂ ಎಫ್ಐಆರ್, ಸಾಕ್ಷಿದಾರರ ಹೇಳಿಕೆಗಳು, ಮಹಜರು ಮುಂತಾದವುಗಳು ಒಳಗೊಂಡಂತೆ ಸಿದ್ಧಪಡಿಸಿದ ವಸ್ತುವಿಷಯವನ್ನು ಪರಿಶೀಲಿಸುವುದು ಮಂಜೂರಾತಿ ಪ್ರಾಧಿಕಾರದ

ಕರ್ತವ್ಯವಾಗಿದೆ.ಅದು ಸ್ವತಃ ಕ್ರಮವಾಗಿ ಮನದಟ್ಟು ಮಾಡಿಕೊಳ್ಳತಕ್ಕದ್ದು.ಸರ್ಕಾರಿ ನೌಕರನನ್ನು ವಿಚಾರಣೆ ಮಾಡುವುದಕ್ಕೆ ಮೇಲ್ನೋಟಕ್ಕೆ ಲಭ್ಯವಾದ ವಸ್ತುವಿಷಯಗಳ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರವು ಸ್ವತಃ ಮನವರಿಕೆ ಮಾಡಿಕೊಂಡ ತರುವಾಯ ಮಾತ್ರವೇ ಸಕ್ಷಮ ಪ್ರಾಧಿಕಾರವು ಮಂಜೂರಾತಿಗೆ ಒಪ್ಪಿಗೆ ನೀಡಬಹುದಾಗಿದೆ.

iii) ತನಿಖಾಧಿಕಾರಿಯು ಸಂಗ್ರಹಿಸಿದ ವಸ್ತುವಿಷಯವನ್ನು ಹಾಜರುಪಡಿಸಿದ ಪಕ್ಷದಲ್ಲಿ ಮಂಜೂರಾತಿ ಆದೇಶದಲ್ಲಿ ಸ್ವತಃ ಅದನ್ನು ಪ್ರಕಟಪಡಿಸಿದ ಪಕ್ಷದಲ್ಲಿ ಮತ್ತು ಮಂಜೂರಾತಿ ಪ್ರಾಧಿಕಾರವು ಮನವಿಯನ್ನು ಗಮನದಲ್ಲಿಟ್ಟುಕೊಂಡು, ಮಂಜೂರಾತಿ ಪ್ರಾಧಿಕಾರವು ಆ ಬಗ್ಗೆ ನಿರ್ಣಯಿಸುತ್ತದೆ, ಮತ್ತು ೧ ತದನಂತರದಲ್ಲಿ ಮಂಜೂರಾತಿ ಆದೇಶವನ್ನು ಹೊರಡಿಸುತ್ತದೆ, ಅಲ್ಲದೆ ಮಂಜೂರಾತಿ ಪ್ರಾಧಿಕಾರದ ಅಧಿಕೃತ ಕರ್ತವ್ಯಗಳನ್ನು ಅಥವಾ ಅಧಿಕೃತ ಪ್ರಕಾರಗಳನ್ನು ನಿರ್ವಹಿಸುವಲ್ಲಿ ಸದರಿ ಆದೇಶವನ್ನು ಹೊರಡಿಸಲಾಗಿದ್ದ ಪಕ್ಷದಲ್ಲಿ ಅಂಥ ಮಂಜೂರಾತಿ ಆದೇಶವನ್ನು ರುಜುವಾತುಪಡಿಸುವುದಕ್ಕೆ ಯಾವುದೇ ಮೌಖಿಕ ಸಾಕ್ಷ್ಯವನ್ನು ಕರೆಯುವ ಅಗತ್ಯವು ಕಂಡುಬರುವುದಿಲ್ಲ.ಆದುದರಿಂದ, ನ್ಯಾಯಾಲಯಗಳು ಮಂಜೂರಾತಿ ಆದೇಶವನ್ನು ಯಾವಾಗಲೂ ಗಂಭೀರವಾಗಿ ಗಮನಕ್ಕೆ ತಂದುಕೊಳ್ಳಬೇಕಾದ ಅಂಶವಾಗಿದೆ.

(iv) ಮಂಜೂರಾತಿ ಪ್ರಾಧಿಕಾರ ಮಂಜೂರಾತಿ ಆದೇಶದಲ್ಲಿ ಮೇಲೆ ಹೇಳಲಾದ ಕೃತ್ಯವನ್ನು ಬಹಿರಂಗಪಡಿಸದೇ ಇರುವ ಪಕ್ಷದಲ್ಲಿ, ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಮಂಜೂರಾತಿ ಪ್ರಾಧಿಕಾರವು ಬೇರೆಡೆಯ ಸಾಕ್ಷ್ಯವನ್ನು ಅವಲಂಬಿಸಬೇಕಾಗುತ್ತದೆ, ಅದು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 19 ನೇ ಪ್ರಕರಣದ ಪ್ರಕಾರದಂತೆ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 197 ನೇ ಪ್ರಕರಣದ ಅಡಿಯಲ್ಲಿ ಮೇಲೆ ಅಗತ್ಯ 3 ಪಡಿಸಿದವುಗಳೆಲ್ಲವನ್ನು ನೆರವೇರಿಸತಕ್ಕದ್ದು.

(v) ಮಂಜೂರಾತಿ ಪ್ರಾಧಿಕಾರದ ಕರ್ತವ್ಯಚ್ಯುತಿಯಿಂದ, ಅಥವಾ ಬಿಟ್ಟುಬಿಡುವಿಕೆಯಿಂದ ವಾಸ್ತವವಾಗಿ ಕಾನೂನಿನ ದೃಷ್ಟಿಯಲ್ಲಿ ಮಂಜೂರಾತಿ ಆದೇಶ ಇಲ್ಲದಿರುವ ಸಂದರ್ಭದ ಮೂಲಕ ನ್ಯಾಯದ ವಿಫಲತೆ ಅಥವಾ ಪೂರ್ವಭಾವನೆಯು ಆರೋಪಿಗೆ ತೊ ೦ ದರೆಯು ೦ ಟುಮಾಡಿದೆಯೆಂದು ವಿಚಾರಣಾಧೀನ ನ್ಯಾಯಾಲಯವು ವ್ಯವಹರಣೆಗಳನ್ನು ವಕಾಲತ್ತು ಮಾಡದ ಮತ್ತು ರುಜುವಾತು ಮಾಡದ ಹೊರತು, ಅಪೀಲು ನ್ಯಾಯಾಲಯ ಅಥವಾ ಪುನರೀಕ್ಷಣಾ ನ್ಯಾಯಾಲಯವು ವಿಚಾರಣಾಧೀನ ನ್ಯಾಯಾಲಯದ ವ್ಯವಹರಣೆಗಳನ್ನು ಹಸ್ತಕ್ಷೇಪ ಮಾಡತಕ್ಕದ್ದಲ್ಲ,

21. ಮೇಲೆ ಹೇಳಲಾದ ನಿರ್ಣಯಗಳ ಬೆಳಕಿನಲ್ಲಿ, ಪ್ರಸ್ತುತ ಈ ನ್ಯಾಯಾಲಯ ಮಂಜೂರಾತಿ ಪ್ರಾಧಿಕಾರ ಉಪಬಂಧಿಸಿದ ಸಂಗತಿ ಅದರೊಂದಿಗೆ ತನಿಖಾಧಿಕಾರಿಯು ಸಂಗ್ರಹಿಸಿದ ವಸ್ತುವಿಷಯಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡಿದೆ ಮತ್ತು ಮಂಜೂರಾತಿ ಪ್ರಾಧಿಕಾರ ಅರ್ಜಿದಾರನ ವಿಚಾರಣೆಗೆ ಸಂಗತಿಗಳನ್ನು ಸ್ವತಃ ತಾನು ಮನವರಿಕೆ ಮಾಡಿಕೊಂಡ ತರುವಾಯವಷ್ಟೆ ಮಂಜೂರಾತಿಗೆ ಒಪ್ಪಿಗೆ ನೀಡಿದೆ.ಆದುದರಿಂದ ಇದು ಈ ಮೊಕದ್ದಮೆಯ ದೃಷ್ಟಿಕೋನಗಳಲ್ಲಿ ನಡೆದ ಸಂಕ್ಷಿಪ್ತವಾದ ಸಂಗತಿಗಳು ನ್ಯಾಯಯುತವಾದುದಾಗಿದೆ ಮತ್ತು ಅವಶ್ಯಕವಾಗಿದೆ.

22. ದಾಖಲೆಗಳಿಂದ ಕಂಡುಬರುವುದೇನೆಂದರೆ, ಮೇಲೆ ನಿರೂಪಿಸಿದಂತೆ ಈ ನ್ಯಾಯಾಲಯವು ನಿರ್ದೇಶನಗಳನ್ನು ಹೊರಡಿಸಿದ ತರುವಾಯ, ವಿಚಾರಣಾಧೀನ ನ್ಯಾಯಾಲಯ ಸರ್ಕಾರದ ಅಧೀನ

ಕಾರ್ಯದರ್ಶಿಯಾಗಿರುವ ರಾಮಚಂದ್ರ ಅವರು ಪ್ರಾ.ಸಾ .1 ಆಗಿರುವರು.ಅವರು, ಮಂಜೂರಾತಿ ಆದೇಶದ ವಾದಾಂಶಗಳನ್ನು ಬಹಳಷ್ಟು ಪುಷ್ಟಿಕರಿಸಿ ಸಾಕ್ಷ್ಯವನ್ನು ಅಭಿಲೇಖಿಸಿರುವರು.ನ್ಯಾಯಾಲಯದ ಮುಂದೆ ಮಂಜೂರಾತಿ ಆದೇಶವನ್ನು ಸಹ ಹಾಜರುಪಡಿಸಲಾಗಿದೆ ಅದನ್ನು ನಿಶಾನೆ ಪಿ .1 ಎಂದು ಗುರುತುಮಾಡಲಾಗಿದೆ.ಸರ್ಕಾರದ ವ್ಯವಹರಣೆಗಳ ಎಲ್ಲ ಟಿಪ್ಪಣಿಗಳನ್ನು ನಿಶಾನೆ ಡಿ .1 ಎಂದು ಗುರುತು ಮಾಡಲಾಗಿದೆ.ಪ್ರಾ.ಸಾ .1 ಅವರು ಪುವರ್ಗಿಸಿ ನೀಡಿದ ಹೇಳಿಕೆಗಳು ಹೀಗಿದೆ.ಹೆಚ್.ಸಿ. ಸತ್ಯನ್ (ಅರ್ಜಿದಾರ) ಅವರನ್ನು ವಿಚಾರಣೆ ಮಾಡುವುದಕ್ಕಾಗಿ ಮಂಜೂರಾತಿ ಆದೇಶವನ್ನು ಕೋರಿ ಸಾರಿಗೆ ಆಯುಕ್ತರಿಗೆ ದಿನಾಂಕ 14.09.2011 ರಂದು ಎಡಿಜಿಪಿ, ಲೋಕಾಯುಕ್ತ ಪೊಲೀಸು, ಬೆಂಗಳೂರು ಅವರು, ಈ ಪತ್ರದೊಂದಿಗೆ ವಿವಿಧ ದಸ್ತಾವೇಜುಗಳಾದ ಎಫ್ಐಆರ್, ಅಂತಿಮ ವರದಿ, ಮಹಜರು, ಸಾಕ್ಷಿಗಳ ಹೇಳಿಕೆಗಳು ಆದಾಯದ ಮೂಲಕ್ಕೆ ಸಂಬಂಧಿಸಿದ ವಿವರಗಳನ್ನು, ಆಪಾದಿತನ ಸ್ವತ್ತುಗಳ ವಿವರಗಳು ಮತ್ತು ಆಪಾದಿತನು ಹೆಚ್ಚುವರಿಯಾಗಿ ಸಂಪಾದಿಸಿದ ಸ್ವತ್ತುಗಳ ವಿವರಗಳನ್ನು, ಮುಂತಾದವುಗಳನ್ನು ಲಗತ್ತಿಸಿ ವಿಚಾರಣೆಗೆ ಮಂಜೂರಾತಿಯನ್ನು ಕೋರಿ ಪತ್ರ ಬರದಿರುವರು.ನಂತರದಲ್ಲಿ, ಅದರಂತೆ, ಪತ್ರದಲ್ಲಿನ ಟಿಪ್ಪಣಿಯನ್ನು ದಾಖಲಿಸಿ ಕಡತವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಅವರಿಗೆ ಕಡತದೊಂದಿಗೆ ಸದರಿ ದಸ್ತವೇಜುಗಳನ್ನು ಕಳುಹಿಸಲಾಗಿದೆ.ಸರ್ಕಾರವು ಎಲ್ಲ ದಸ್ತಾವೇಜುಗಳನ್ನು, ಸಂಗತಿಗಳನ್ನು ಪರಾಮರ್ಶಿಸಿದ ನಂತರದಲ್ಲಿ ಆಪಾದಿತನ ಆದಾಯದ ಮೂಲವು ಹಾಗೂ ಸಂಪಾದಿತ ಸ್ವತ್ತುಗಳು ಅಸಮ ಪ್ರಮಾಣದಲ್ಲಿ ಶೇ .55.15 ರಷ್ಟು ಹೆಚ್ಚಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಕಡತದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿ ದಾಖಲಿಸಿರುವರು.ಕಾರಣದಿಂದ ರಾಜ್ಯಪಾಲರ ಹೆಸರಿನಲ್ಲಿ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿದೆ ಎಂದು ಸಾಕ್ಷ್ಯದಲ್ಲಿ ಒತ್ತಿಹೇಳಿರುವರು.ಪಾಟೀ-ಸವಾಲಿನ ಸಂದರ್ಭದಲ್ಲಿಯೂ, ನಿಶಾನೆ ಡಿ .1 ರ ಪ್ರಕಾರದಂತೆಯೇ ಸರ್ಕಾರದ ವ್ಯವಹರಣೆಗಳನ್ನು ಅಂಗೀಕರಿಸಿರುವುದನ್ನು ಒತ್ತಿ ಹೇಳಿದ್ದಾನೆ.ಪಾಟೀ-ಸವಾಲಿನ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ (ವ್ಯವಹರಣೆಗಳ ಹಂಚಿಕೆ) ನಿಯಮಗಳು, 1977 ಕ್ಕೆ ಅನುಸಾರವಾಗಿ ಕಡತವನ್ನು ರಾಜ್ಯಪಾಲರಿಗೆ ಕಳುಹಿಸುವ ಅಗತ್ಯವಿರುವುದಿಲ್ಲ ಎಂಬ ಅಂಶವು ರುಜುವಾತಾಗಿರುತ್ತದೆ.

23. ನಿಶಾನೆ ಪಿ .1 ನ್ನು ಓದಲಾಗಿ, ಆ ಯಾವುದೇ ಮಂಜೂರಾತಿ ಆದೇಶದಲ್ಲಿ ಆಪಾದಿತನ ವಿರುದ್ಧ ಮಾಡಲಾದ ಆರೋಪಗಳ ಪ್ರಸ್ತಾವನೆಯಲ್ಲಿ ಆರೋಪ ಪಟ್ಟಿಯಲ್ಲಿ ಆಪಾದನೆಗಳನ್ನು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.ಎರಡನೇ ಪುಟದಲ್ಲಿ, ವಿಚಾರಣಾ ಏಜೆನ್ಸಿಯು ಎಲ್ಲಾ ದಸ್ತಾವೇಜುಗಳನ್ನು ಸಿದ್ಧಪಡಿಸಿದೆ ಮತ್ತು 3 ನೇ ಪುಟದಲ್ಲಿ ಸರ್ಕಾರವು ಯಾವ ಎಲ್ಲ ವಸ್ತುವಿಷಯಗಳನ್ನು ಪರಿಗಣಿಸಿ ಮತ್ತು 4 ನೇ ಪುಟದಲ್ಲಿ, ಸರ್ಕಾರದ ನೆರವೇರಿಕೆ ಮತ್ತು 5 ನೇ ಮತ್ತು 6 ನೇ ಪುಟದಲ್ಲಿ ನಿರ್ದಿಷ್ಟವಾಗಿ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13 ( 1) (ಸಿ) ಪ್ರಕರಣದೊಂದಿಗೆ ಓದಲಾದ 13 ( 2) ಮತ್ತು 19 (ಸಿ) ಪ್ರಕರಣಗಳ ಮೇರೆಗೆ ಹೇಳಲಾದ ಅಪರಾಧಕ್ಕಾಗಿ ಕಾನೂನಿನ ಸಕ್ಷಮ ನ್ಯಾಯಾಲಯದ ಮುಂದೆ ಆಪಾದಿತನನ್ನು ವಿಚಾರಣೆ ಮಾಡುವುದಕ್ಕೆ ವಿಚಾರಣಾ ಏಜೆನ್ಸಿಗೆ ಅನುಮತಿಸಿ ಹೊರಡಿಸಿದ ಮಂಜೂರಾತಿ ಆದೇಶವನ್ನು ಒಳಗೊಂಡಿದೆ.ನಂತರದಲ್ಲಿ 19 ( 1) (ಸಿ) ಗೆ ಬದಲಾಗಿ 19 ( 1) (ಬಿ) ಎಂದು ತಪ್ಪಾದ ಬೆರಳಚ್ಚು ಮಾಡಿದನ್ನು ಸರಿಪಡಿಸಿದ ಸಂಬಂಧದಲ್ಲಿನ ತಿದ್ದೋಲೆಯನ್ನು ಸಹ ಹೊರಡಿಸಲಾಗಿದೆ.

24. ಸದರಿ ಮಂಜೂರಾತಿ ಆದೇಶವನ್ನು ತುಂಬಾ ಜಾಗರೂಕತೆಯಿಂದ ಪರಾಮರ್ಶಿಸಿದಾಗ, ಪ್ರಾ.ಸಾ .1 ರ ಉಲ್ಲೇಖಿತ ಸಾಕ್ಷ್ಯವನ್ನು ಹೊರತುಪಡಿಸಿದ್ದಾಗ್ಯೂ, ಸದರಿ ಆದೇಶದಲ್ಲಿ ಆಪಾದಿತನ ವಿರುದ್ಧ ಮಾಡಲಾದ ಆರೋಪಗಳನ್ನು ಉಲ್ಲೇಖಿಸಲಾಗಿದೆ, ತನಿಖಾ ಏಜೆನ್ಸಿಯು ಸಿದ್ಧಪಡಿಸಿದ ದಸ್ತಾವೇಜುಗಳು, ಸರ್ಕಾರದ

ಅವಗಾಹನೆಗಳು ಮತ್ತು ಅದರ ನೆರವೇರಿಕೆಗಳು, ಆರೋಪಿಯ ಅಪರಾಧದ ಸಂಬಂಧದಲ್ಲಿ ಅಪರಾಧ ಆಯೋಗದ ಉಲ್ಲೇಖಗಳು ಮತ್ತು ನಂತರದಲ್ಲಿ ಆರೋಪಿಯನ್ನು ವಿಚಾರಣೆ ಮಾಡುವುದಕ್ಕೆ, ಹೊರಡಿಸಿದ ಮಂಜೂರಾತಿ ಆದೇಶವನ್ನು ಗಮನಕ್ಕೆ ತಂದುಕೊಳ್ಳಲಾಗಿದೆ.ಆದುದರಿಂದ ಇದರಲ್ಲಿ ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ನೀಡಿದ ನಿದರ್ಶನಪೂರ್ವಕ ನಿರ್ಣಯಗಳ ಪ್ರಕಾರದಂತೆ ಎಲ್ಲ ಅಗತ್ಯತೆಗಳನ್ನು ಪಾಲನೆ ಮಾಡಲಾಗಿದೆ.

25. ಮಾನ್ಯ ನ್ಯಾಯವಾದಿಗಳು ಎತ್ತಿರುವ ಪ್ರಶ್ನೆಯೇ ಬೇರೆ, ಎತ್ತಲಾದ ಪ್ರಶ್ನೆ ಹೀಗಿದೆ.ಈ ಮೊಕದ್ದಮೆಯಲ್ಲಿ ಮಂಜೂರಾತಿಗೆ ನೀಡಿದ ಒಪ್ಪಿಗೆಗೆ ಸಚಿವರು ತಮ್ಮ ಗಮನವನ್ನು ಅನ್ವಯಿಸಿಕೊಂಡಿರುವರೇ ಎಂಬುದು ನ್ಯಾಯವಾದಿಗಳು ಎತ್ತಿರುವ ಪ್ರಶ್ನೆಯಾಗಿದೆ.ಪ್ರಾ.ಸಾ .1 ಇವರ ಪ್ರಕಾರ ಅವರೇ ಸ್ವತಃ ಸಕ್ಷಮ ಪ್ರಾಧಿಕಾರವಾಗಿರುವರು.ಇಡೀ ಅಭಿಲೇಖಗಳನ್ನು ಅವಲೋಕಿಸಿರುವರು ಮತ್ತು ಆರೋಪಿಯ ವಿರುದ್ಧ ಮಾಡಲಾದ ಎಲ್ಲ ಆರೋಪಗಳು ಮೇಲ್ನೋಟಕ್ಕೆ ಸ್ವತಃ ಅವರಿಗೆ ಮನದಟ್ಟಾಗಿರುವುದರಿಂದ ಮಂಜೂರಾತಿ ಆದೇಶವನ್ನು ಹೊರಡಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ, ಆಪಾದಿತನು ಸ್ವತಃ ಗುರುತುಮಾಡಿದ ನಿಶಾನೆ ಡಿ 1 ರಲ್ಲಿರುವಂತೆಯೇ ಅದೇ ಪ್ರಾ.ಸಾ .1 ಕ್ಕೆ ಮುಖಾಮುಖಿಯಾಗಿರುವುದಕ್ಕೆ ಸಹಾಯಕಾರಿಯಾಗಿದೆ.ಸರ್ಕಾರವು ಈ ವಿಷಯದ ಟಿಪ್ಪಣಿ ಹಾಳೆಯನ್ನು ನಿರ್ವಹಿಸಿರುತ್ತದೆ.ಇಲಾಖೆಯ ಸಂಬಂಧಪಟ್ಟ ಅಧಿಕಾರಿಯೂ ಅದನ್ನು ನಿರ್ವಹಿಸಿರುವುದನ್ನು ನೋಡಬಹುದಾಗಿದೆ.ವರದಿಯನ್ನು ಸ್ವೀಕರಿಸಿದ ನಂತರ ಮತ್ತು ಮೇಲಿನ ದಸ್ತಾವೇಜುಗಳನ್ನು ಆದಷ್ಟು ಪರಾಮರ್ಶಿಸುವುದಕ್ಕೆ, ಸಾರಿಗೆ ಆಯುಕ್ತರಿಂದ ಆರೋಪಪಟ್ಟಿಯೊಂದಿಗೆ ಲಗತ್ತಾದ ಪತ್ರಗಳು ಈ ಎಲ್ಲ ವಿಷಯಗಳನ್ನು ಟಿಪ್ಪಣಿ ಹಾಳೆಯಲ್ಲಿ ವಿವರವಾಗಿ ದಾಖಲಿಸಲಾಗಿದೆ.ಸದರಿ ಟಿಪ್ಪಣಿ ಹಾಳೆಯಲ್ಲೂ ಎಡಿಜಿಪಿ, ಲೋಕಾಯುಕ್ತರ ವರದಿಯಲ್ಲಿ ಹೇಳಿಕೆಗಳನ್ನು ಸಹ ಒಳಗೊಂಡಿದೆ.ಸರ್ಕಾರದ ಪರಿಗಣನೆಗಾಗಿ ಇಡೀ ಆರೋಪಪಟ್ಟಿಯ ಪತ್ರಗಳೊಂದಿಗೆ ಸದರಿ ವರದಿಯನ್ನು ಸಹ ಕಳುಹಿಸಲಾಗಿದೆ.ಅಲ್ಲದೆ, ಟಿಪ್ಪಣಿ ಹಾಳೆಯು (ಪ್ಯಾರಾ 18 ನೋಡಿ) ಆರೋಪಿಯು ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಲೋಕಾಯುಕ್ತ ಪೊಲೀಸರು ಮಾಡಿದ ಆರೋಪಕ್ಕೆ ಆರೋಪಿಯು ಅಸಮ ಪ್ರಮಾಣದಲ್ಲಿ ಹೊಂದಿರುವ ಸಂಪತ್ತಿಗೆ ಸಂಬಂಧಿಸಿದಂತೆ ತನ್ನ ಆದಾಯದ ಮೂಲ ಬಗ್ಗೆ ವಿವರಣೆ ನೀಡುವುದಕ್ಕೆ ಒಂದು ಅವಕಾಶವನ್ನು ಒದಗಿಸುವುದಕ್ಕೆ ಕೋರಿ ಲಿಖಿತ ಮನವಿಯನ್ನು ಸಲ್ಲಿಸಿರುವುದನ್ನು ಅದು ಬಹಿರಂಗಪಡಿಸುತ್ತದೆ.ಈ ಮನವಿ ಪತ್ರಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಪೀಠಾಸೀನಾಧಿಕಾರಿಯು ಪ್ಯಾರಾ 24 ರಲ್ಲಿ ವಸ್ತು ವಿಷಯವನ್ನು ದಾಖಲಿಸಿ ಪ್ರಧಾನ ಕಾರ್ಯದರ್ಶಿಯವರ ಮುಂದೆ ಕಡತವನ್ನು ಮಂಡಿಸಿರುವರು ಮತ್ತು ಸದರಿ ಪತ್ರದೊಂದಿಗೆ ವರದಿ ಮತ್ತು ಇತರ ವಸ್ತುವಿಷಯ ದಸ್ತಾವೇಜುಗಳನ್ನು ಸಾರಿಗೆ ಸಚಿವರ ಅವಗಾಹನೆಗಾಗಿ ಮಂಡಿಸಲಾಗಿರುತ್ತದೆ.ಟಿಪ್ಪಣಿ ಹಾಳೆಯ 30 ನೇ ಪ್ಯಾರಾದ ನಮೂದನೆಯೂ ಸಹ ಮೌಲ್ಯಯುತವಾದುದಾಗಿದೆ.ಪ್ಯಾರಾ 30 ರಲ್ಲಿನ ಟಿಪ್ಪಣಿಯಲ್ಲಿ ಬಹಿರಂಗಗೊಂಡ ವಿಷಯ ಹೀಗಿದೆ, ಕಡತದ ವಸ್ತುವಿಷಯವನ್ನು ಸಮಗ್ರವಾಗಿ ಪರಾಮರ್ಶಿಸಿದ ನಂತರ ಸಾರಿಗೆ ಸಚಿವರು ಆರೋಪಿಯು ಸಲ್ಲಿಸಿದ ಸದರಿ ಪತ್ರದ ಬಗ್ಗೆ ಲೋಕಾಯುಕ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.ಈ ಟಿಪ್ಪಣಿಯೂ ತುಂಬಾ ಸಂಕೀರ್ಣತೆಯಿಂದ ಕೂಡಿದೆ, ಹೇಗೆಂದರೆ ಪ್ರಧಾನ ಕಾರ್ಯದರ್ಶಿಯವರು ಮಂಜೂರಾತಿ ಆದೇಶದ ಅನುಮೋದನೆಗಾಗಿ ಶಿಫಾರಸ್ಸು ಮಾಡಿ ಕಡತವನ್ನು ಸಾರಿಗೆ ಸಚಿವರ ಮುಂದೆ ಮಂಡಿಸಿರುವರು, ಆದರೆ ಸಾರಿಗೆ ಸಚಿವರು ಆರೋಪಿಯ ಪತ್ರವನ್ನು ಲೋಕಾಯುಕ್ತರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಟಿಪ್ಪಣಿಯಲ್ಲಿ

ಉಲ್ಲೇಖಿಸಿರುವರು.ಇದರಿಂದ ಸಾರಿಗೆ ಸಚಿವರು ಅಭಿಲೇಖಿಸಿದ ವಸ್ತುವಿಷಯವನ್ನು ಸರಿಯಾದ ಕ್ರಮದಲ್ಲಿ ಗಮನಕ್ಕೆ ತಂದುಕೊಂಡಿಲ್ಲವೆಂದು ಅಂಥ ಆದೇಶವನ್ನು ಸಾರಿಗೆ ಸಚಿವರು ಹೊರಡಿಸಿಲ್ಲವೆಂದು ಹೇಳಲು ಸಾಧ್ಯವಿಲ್ಲ.ಹಾಗಾಗಿ ವಿವರಣೆ ನೀಡಲು ಒಂದು ಅವಕಾಶವನ್ನು ಕೋರಿ ಆರೋಪಿ ಬರೆದ ಪತ್ರಕ್ಕೆ ಸಾರಿಗೆ ಸಚಿವರು ವಸ್ತುವಿಷಯವನ್ನು ಲೋಕಾಯುಕ್ತರ ಮುಂದೆ ಹಾಜರುಪಡಿಸಲು ಮತ್ತು ಆರೋಪಿಯ ಪತ್ರದ ಉಲ್ಲೇಖದೊಂದಿಗೆ ಲೋಕಾಯುಕ್ತರ ಅಭಿಪ್ರಾಯವನ್ನು ಕೋರಿ ತದನಂತರದಲ್ಲಿ ಆದೇಶವನ್ನು ಹೊರಡಿಸಬೇಕೆಂದು ಟಿಪ್ಪಣಿಯಲ್ಲಿ ನಮೂದಿಸಲಾಗಿದೆ.ಆನಂತರದಲ್ಲಿ, ಅರ್ಜಿದಾರರ ಸದರಿ ಪತ್ರವನ್ನು ಲೋಕಾಯುಕ್ತ ಕಚೇರಿಗೆ ಕಳುಹಿಸಲಾಗಿದೆ ಮತ್ತು ಅದರ ಅಭಿಪ್ರಾಯವನ್ನು ಪಡೆದುಕೊಳ್ಳಲಾಗಿದೆ ಮತ್ತು ನಂತರದಲ್ಲಿ ಮಂಜೂರಾತಿ ಆದೇಶವನ್ನು ಹೊರಡಿಸುವುದಕ್ಕಾಗಿ ಸಚಿವರ ಅನುಮೋದನೆಗಾಗಿ ಇಡೀ ಕಡತವನ್ನು ಉಪ ಕಾರ್ಯದರ್ಶಿಯವರ ಮುಂದೆ ಮತ್ತೆ ವಸ್ತುವಿಷಯವನ್ನು ಮಂಡಿಸಲಾಗಿದೆ.ಹಾಗೆಯೇ, ಅಧೀನ ಕಾರ್ಯದರ್ಶಿಯವರೊಂದಿಗೆ ಉಪ ಕಾರ್ಯದರ್ಶಿಯವರು ಚರ್ಚಿಸಿರುವರು ಮತ್ತು ಪ್ರಧಾನ ಕಾರ್ಯದರ್ಶಿಯವರ ಮುಂದೆ ವಿಷಯವನ್ನು ಮಂಡಿಸಿರುವರು ಅಂದರೆ ಸಾರಿಗೆ ಸಚಿವರ ಮುಂದೆ ವಿಷಯವನ್ನು ಮಂಡಿಸಿರುವರು.ಸಾರಿಗೆ ಸಚಿವರು ಮಂಜೂರಾತಿ ಆದೇಶವನ್ನು ಹೊರಡಿಸುವುದಕ್ಕಾಗಿ ಪೀಠಾಸೀನ ಅಧಿಕಾರಿಯು ನಮೂದಿಸಿದ ಟಿಪ್ಪಣಿಯನ್ನು ಅನುಮೋದಿಸಿ ತಮ್ಮ ಸಹಿಯನ್ನು ಹಾಕಿರುವರು ಮತ್ತು ಹಾಗೇ ಅನುಮೋದನೆಗೊಂಡ ಕರಡು ಪ್ರತಿಯು ನಂತರದಲ್ಲಿ ಅದನ್ನು ಮಂಜೂರಾತಿ ಆದೇಶವಾಗಿ ಹೊರಡಿಸಲಾಗಿರುವುದು ಕಂಡುಬರುತ್ತದೆ.

26. ಲೋಕಾಯುಕ್ತ ಪೊಲೀಸರು ತಮ್ಮ ವರದಿಯೊಂದಿಗೆ ಸಲ್ಲಿಸಿದ ಎಲ್ಲ ವಸ್ತುವಿಷಯದಲ್ಲಿ ಅಭಿಲೇಖಿಸಿದ ಇಡೀ ವಸ್ತುವಿಷಯವನ್ನು ಓದಿಕೊಂಡು ಮತ್ತು ಅರ್ಥೈಸಿಕೊಂಡ ಮೇಲೆ, ಕಡತದ ಟಿಪ್ಪಣಿಯಲ್ಲಿ ಅದನ್ನು ಸ್ಪಷ್ಟವಾಗಿ ಪ್ರಕಟಪಡಿಸಿ ಶಾಖಾಧಿಕಾರಿ, ಅಧೀನ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ ಮುಖಾಂತರ ಸಾರಿಗೆ ಸಚಿವರು ಪರಿಗಣನೆಗಾಗಿ ಮಂಡಿಸಲಾಗಿದೆ ಮತ್ತು ತದನಂತರದಲ್ಲಿ ಸಾರಿಗೆ ಸಚಿವರು ಅದಕ್ಕೆ ಅನುಮೋದನೆ ನೀಡಿರುವರು.ಇಲಾಖೆಗೆ ಆರೋಪಿಯು ನೀಡಿದ ಪತ್ರದ ಸಂಬಂಧದಲ್ಲಿ ಲೋಕಾಯುಕ್ತರ ವಿವರಣೆಯನ್ನು ಕೋರಿ ಅಲ್ಲಿಂದಬಂದ ಅಭಿಪ್ರಾಯವನ್ನು.ಈ ಎಲ್ಲಾ ಅಂಶಗಳನ್ನು ಸಚಿವರು ಗಮನಿಸಿಲ್ಲ ಎಂದು ಹೇಳಲು ಸಾಧ್ಯವಿಲ್ಲ ಟಿಪ್ಪಣಿಯಲ್ಲಿ ಈಗಾಗಲೇ ವಸ್ತುವಿಷಯವನ್ನು ನಮೂದಿಸಲಾಗಿದೆ.ಅದರ ಮೇಲೆಯೇ ಮಂಜೂರಾತಿ ಆದೇಶವು ಅನುಮೋದನೆಗೊಂಡಿದೆ.ಅಲ್ಲದೆ ಅನ್ಯಥಾ, ಇಡೀ ಅಭಿಲೇಖಗಳನ್ನು ಸಚಿವರಿಗೆ ಕಳುಹಿಸಿರುವಾಗ ಸಚಿವರು ಒಂದು ಬಾರಿ ಅನುಮೋದನೆ ನೀಡಿರುವಾಗ ಅಂಥ ಆದೇಶವನ್ನು ಹೊರಡಿಸಲು ಅವನು ವಸ್ತುವಿಷಯವನ್ನು ಮನವರಿಕೆ ಮಾಡಿಕೊಂಡಿದ್ದಾನೆಯೇ ಎಂಬುದನ್ನು ನ್ಯಾಯಾಲಯ ಅಭಿಲೇಖಿಸಿದ ವಸ್ತುವಿಷಯಗಳನ್ನು ಪರಾಮರ್ಶಿಸುವ ಮುಖಾಂತರ, ಅಂಥ ಮಂಜೂರಾತಿ ಆದೇಶ ಹೊರಡಿಸಲು ಸರ್ಕಾರವು ಅರ್ಜಿಯಲ್ಲಿ ಕಂಡುಬರುವ ಮೇಲ್ನೋಟದ ಅಂಶದ ಮೇಲೆಯೇ ಸರ್ಕಾರ ಮಂಜೂರಾತಿಯನ್ನು ಹೊರಡಿಸಿದೆ.ಆದುದರಿಂದ ವಾಸ್ತವ ಸಂಗತಿಗಳ ಮೇಲೆ, ವಿಚಾರಣಾಧೀನ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಸಮರ್ಥವಾದ ಕಾರಣಗಳು ನಮಗೆ ಇಲ್ಲಿ ಕಂಡುಬರುತ್ತಿಲ್ಲ.

27. ಮುಕ್ತಾಯಕ್ಕೆ ಮುಂಚೆ, ಮಂಜೂರಾತಿ ನೀಡಿಕೆಯ ಉದ್ದೇಶವನ್ನು ಸುಸಂಗತವಾಗಿ ಮನವರಿಕೆ ಮಾಡಿಕೊಳ್ಳುವುದು ಅವಶ್ಯಕ.ಮಂಜೂರಾತಿ ನೀಡಿಕೆಯ ಉದ್ದೇಶವು ಮುಗ್ಧವ್ಯಕ್ತಿಯನ್ನು ಮಾತ್ರವೇ ಸಂರಕ್ಷಿಸುವುದಾಗಿದೆ.ಅಂದರೆ, ವ್ಯಕ್ತಿಯನ್ನು ಅಪರಾಧದಲ್ಲಿ ಸಂಚಿನಿಂದ ತಪ್ಪಾದ ದೋಷಾರೋಪಕ್ಕೆ

ಸಿಲುಕಿಸುವ ಅಥವಾ ಮೂಲ ವಸ್ತುವಿಷಯದ ದಾಖಲೆಯಲ್ಲಿ ಅಪರಾಧವು ಮೇಲ್ನೋಟದಲ್ಲಿ ಕಂಡುಬರದಿರುವಾಗ ಮತ್ತು ದೋಷಪೂರ್ಣ ವ್ಯವಹರಣೆಯಾಗಿದೆ ಎಂದು ಕೋರಿರುವಾಗ ಮಂಜೂರಾತಿ ನೀಡಿಕೆಯ ಉದ್ದೇಶದಲ್ಲಿ ಎಲ್ಲ ವಸ್ತುವಿಷಯವನ್ನು ಪರಾಮರ್ಶಿಸಲಾಗುತ್ತವೆ.ನ್ಯಾಯಾಲಯಗಳು ಈ ಸಂಗತಿಯನ್ನಷ್ಟೇ ಗಮನಕ್ಕೆ ತಂದುಕೊಳ್ಳುವುದಿಲ್ಲ.ಅದು ಆರೋಪಿಯ ವಿರುದ್ಧ ಲಭ್ಯವಾಗುವ ಯಾವುದೇ ಸಾದೃಶ್ಯದ ವಸ್ತುವಿಷಯಗಳು ಇದ್ದರೆ ಮತ್ತು ಮಂಜೂರಾತಿ ಪ್ರಾಧಿಕಾರದ ಮನವರಿಕೆಯ ಬಗ್ಗೆ, ಭ್ರಷ್ಟಾಚಾರ ರೋಗವನ್ನು ನಿರ್ಭಂಧಿಸುವ ವ್ಯವಸ್ಥೆಯಲ್ಲಿ, ನ್ಯಾಯಾಲಯಗಳು ಮಂಜೂರಾತಿ ಆದೇಶವನ್ನು ಹೊರಡಿಸುವುದಕ್ಕಾಗಿ ಕಾನೂನಿನಲ್ಲಿ ಉದ್ದೇಶಿತ ಪ್ರಕ್ರಿಯೆಯೊಂದಿಗೆ ಉದಾತ್ತವಾಗಿ ವ್ಯವಹರಿಸುವುದು.

28. ಇಲ್ಲಿ ಮೌಲ್ಯಯುತವಾದ ಮಾತುಗಳನ್ನು ಗಮನಿಸಬೇಕಾಗುತ್ತದೆ.ಭ್ರಷ್ಟಾಚಾರ ವಿರೋಧಿ ಕಾನೂನುಗಳ ಉದ್ದೇಶವು ಸರ್ಕಾರಿ ನೌಕರರಲ್ಲಿ ವ್ಯಾಪಕವಾಗಿರುವ ಲಂಚಗುಳಿತನ ಮತ್ತು ಭ್ರಷ್ಟಾಚಾರವನ್ನು ನಿರ್ಭಂಧಿಸುವುದಕ್ಕಾಗಿ ಪರಿಣಾಮಕಾರಿ ಉಪಬಂಧವನ್ನು ಮಾಡುವುದಾಗಿದೆ.ಸರ್ಕಾರಿ ನೌಕರರ ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಬಂಧಿಸುವುದಕ್ಕೆ ಸಾಮಾಜಿಕ ಶಾಸನಗಳು ನಿರ್ವಿವಾದವಾದುದಾಗಿದೆ ಮತ್ತು ಶಾಸನಗಳ ಉದ್ದೇಶಗಳು ವಿವೇಚನಾಯುಕ್ತ ವಿನ್ಯಾಸದಲ್ಲಿ ರೂಪುಗೊಂಡಿದೆ.ಅನ್ಯಥಾ ನ್ಯಾಯಾಲಯವು ಶಾಸನಗಳನ್ನು ಉಲ್ಲೇಖಿಸುವಾಗ, ಮಂಜೂರಾತಿ ಆದೇಶದ ಪ್ರತಿಯೊಂದು ಪದ ಅಥವಾ ವಾಕ್ಯಗಳನ್ನು ಅಥವಾ ವಿಚಾರಣೆಯಲ್ಲಿ ಮಂಡಿಸಿದ ಸಾಕ್ಷ್ಯಗಳನ್ನು ಅತೀ ಎಚ್ಚರಿಕೆಯಿಂದ ಗಮನಕ್ಕೆ ತಂದುಕೊಳ್ಳದಿದ್ದರೆ, ಅದು ಬಿಕ್ಕಟ್ಟನ್ನು ಸೃಜಿಸುತ್ತದೆ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಉದ್ದೇಶವನ್ನು ಸಂರಕ್ಷಿಸುವ ಸಂದರ್ಭವು ಒದಗಿಬರುವುದಿಲ್ಲ.ಸಮಾಜಕ್ಕೆ ಪೆಡಂಭೂತವಾಗಿ ಹಬ್ಬಿರುವ ಲಂಚದ ವಿರುದ್ಧ ಹೋರಾಡುವ ಸಲುವಾಗಿ ಅಧಿನಿಯಮಿಸಲಾದ ಸಾಮಾಜಿಕ ಕಾನೂನು ಇದಾಗಿದೆ.ನ್ಯಾಯಾಲಯಗಳು ಚಲನಶೀಲವಾಗಿ, ತುಂಬಾ ಎಚ್ಚರಿಕೆ ಮತ್ತು ವಿವೇಚನಾಯುಕ್ತವಾಗಿ ಈ ಅಧಿನಿಯಮದ ಸಂಗತಿಗಳನ್ನು ಮತ್ತು ಸಮಾಜದಲ್ಲಿ ಸಾರ್ವಜನಿಕ ಸ್ವಾಸ್ಥ್ಯ ಮತ್ತು ಸುರಕ್ಷತೆಯನ್ನು ವ್ಯವಸ್ಥಿತವಾಗಿ ನಿರ್ವಹಿಸುವಂತಹ ಮೊಕದ್ದಮೆಗಳಲ್ಲಿ ಒಳಗೊಂಡಿರುವ ಕಾನೂನು ದೃಷ್ಟಿಕೋನಗಳನ್ನು ಪರಿಭಾಷಿಸಿಕೊಳ್ಳತಕ್ಕದ್ದು ನ್ಯಾಯಾಲಯಗಳು ಅಧಿನಿಯಮಗಳ ವಾಸ್ತವ ಗುರಿ ಮತ್ತು ಉದ್ದೇಶಗಳನ್ನು ಅರ್ಥೈಸಲು, ಸಂರಕ್ಷಿಸಲು ಮತ್ತು ಮುನ್ನಡೆಸಲು ಪ್ರಯತ್ನಿಸುತ್ತವೆ.ತುಂಬಾ ಅಪರೂಪವಾಗಿ ಕಾನೂನು ಕಾರ್ಯನೀತಿಗಳು ಉಪಬಂಧಗಳು ಸಂಗತಿಗಳನ್ನು ಮತ್ತು ಪರಿಭಾಷೆಗಳನ್ನು ಯಾವುದೇ ಕಠಿಣ ಅಥವಾ ಅತೀ-ತಾಂತ್ರಿಕ ವಿಶ್ಲೇಷಣೆಯ ಸಂದರ್ಭದಲ್ಲಿ ಮಾತ್ರವೇ ಅಧಿನಿಯಮದ ಉಪಬಂಧಗಳ ವಿಫಲತೆಯನ್ನು ಎತ್ತಿಹಿಡಿಯುತ್ತವೆ.ಸಾರ್ವಜನಿಕ ಸ್ವಾಸ್ಥ್ಯತೆಯನ್ನು ಒಟ್ಟಾರೆಯಾಗಿ ನಾಶಪಡಿಸುವ ಮತ್ತು ಸಾರ್ವಜನಿಕ ಸ್ವಾಸ್ಥ್ಯತೆಯನ್ನು ಪುನರ್ ಸ್ಥಾಪನೆ ಮಾಡಲು ಕಾರ್ಯಸಾಧ್ಯವಾಗದ ಕಾರ್ಯಭಾರದ ಹಂತದಲ್ಲಿ ನಾವು ಈ ರೀತಿಯ ತೀರ್ಮಾನಗಳನ್ನು ತೆಗೆದುಕೊಳ್ಳಬಹುದಾಗಿದೆ.

29. ಹಾಗಾಗಿ, ನ್ಯಾಯಾಲಯದ ಮುಂದೆ ಮಂಡಿಸಲಾದ ವಸ್ತುವಿಷಯಗಳೆಲ್ಲವನ್ನು ಅವಗಾಹನೆಗೆ ತಂದುಕೊಂಡ ಮೇಲೆ ನ್ಯಾಯಾಲಯಗಳೂ ಆ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾಗಿದೆ.ಅಲ್ಲದೆ, ಅದರಲ್ಲಿ ಕೆಲವೊಂದು ಸಣ್ಣ ಪ್ರಮಾಣದ ಸಂಶಯಗಳು ಅಥವಾ ಗೊಂದಲಗಳು ಕಂಡುಬಂದಲ್ಲಿ, ಅದನ್ನು ನಿರ್ಣಯಿಸಿ ಒಟ್ಟಾರೆಯಾಗಿ ಆ ಯಾವುದೇ ಮಂಜೂರಾತಿ ಆದೇಶವನ್ನು ಹಾಗೇ ತಳ್ಳಿ ಹಾಕಲು ಸಾಧ್ಯವಾಗದಿರುವಾಗ ಅಂಥ ಆದೇಶವನ್ನು ಅಂಗೀಕರಿಸಬಹುದಾಗಿದೆ.ನ್ಯಾಯಾಲಯ ಎಲ್ಲ ಕಡೆಯಿಂದಲೂ ಸನ್ನಿವೇಶಗಳನ್ನು, ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ.ಅದರಲ್ಲೂ, ವಾಸ್ತವವಾಗಿ

ಮಂಜೂರಾತಿ ಪ್ರಾಧಿಕಾರ ಆರೋಪಿಯ ವಿರುದ್ಧ ಅವಲೋಕಿಸಿದ ಸಂದರ್ಭಗಳು ಮತ್ತು ವಸ್ತುವಿಷಯಗಳನ್ನು ವಿಶ್ಲೇಷಿಸಿದ ನಂತರದಲ್ಲಿ ತನ್ನ ವಿವೇಚನೆಯನ್ನು ಅನ್ವಯಿಸಿಕೊಂಡು ನೀಡಿದ ಮಂಜೂರಾತಿಯನ್ನು ಅತಿ ಜಾಗರೂಕತೆಯಿಂದ ನ್ಯಾಯಾಲಯ ಅವಲೋಕಿಸಿದೆ.ನ್ಯಾಯಾಲಯವು, ಮಂಜೂರಾತಿ ಪ್ರಾಧಿಕಾರವು " ನಾನು ಇಡೀ ದಾಖಲೆಗಳನ್ನು ಅವಲೋಕಿಸಿದ್ದೇವೆ ಮತ್ತು ಸ್ವತಃ ನನಗೆ ವಸ್ತುವಿಷಯವು ಮನವರಿಕೆಯ ನಂತರದಲ್ಲಿ ಮಾತ್ರವೇ ಮಂಜೂರಾತಿಯನ್ನು ನೀಡಿದ್ದೇನೆ " ಎಂದು ನಿರ್ದಿಷ್ಟವಾಗಿ ಬಳಸುವಂತಹ ಪದಗಳನ್ನು ಬಳಸಬೇಕೆಂದು ಅಪೇಕ್ಷಿಸುವುದು ಸರಿಯಾದುದಲ್ಲ, ಆದರೆ, ದಾಖಲೆಗಳಲ್ಲಿನ ಸನ್ನಿವೇಶಗಳು ಮತ್ತು ಸಂಗತಿಗಳು ಯುಕ್ತವಾಗಿವೆಯೇ ಎಂಬುದನ್ನು ನೋಡಬೇಕಾಗುತ್ತದೆ ಮತ್ತು ನಂತರದಲ್ಲಿ ಅದೆಲ್ಲವು ತೃಪ್ತಿದಾಯಕವಾಗಿದ್ದಾಗ ಮಾತ್ರವೇ, ನಿರ್ದಿಷ್ಟ ಪದಗಳನ್ನು ನಮೂದು ಮಾಡದೆಯೇ ಆದೇಶವನ್ನು ಹೊರಡಿಸಬಹುದಾಗಿದೆ, ಅಂಥ ಮಂಜೂರಾತಿ ಆದೇಶವು ನಿರ್ದಿಷ್ಟ ಪದಗಳನ್ನು ಹೊಂದಿಲ್ಲವೆಂದು, ಆದೇಶವನ್ನು ಅಸಿಂಧುಗೊಳಿಸುವುದು ಯುಕ್ತವಾದುದಲ್ಲ.ನನ್ನ ಅಭಿಪ್ರಾಯೋಕ್ತಿಯಲ್ಲಿ, ಈ ಮೊಕದ್ದಮೆಯಲ್ಲಿ ಮಂಜೂರಾತಿ ಪ್ರಾಧಿಕಾರವು ಕಾನೂನು ಸಮ್ಮತೆ, ಸಕ್ಷಮತೆ ಮತ್ತು ಕಾನೂನು ಅನ್ವಯಕಗಳನ್ನು ಗಮನಕ್ಕೆ ತಂದುಕೊಂಡಿದೆ ಎಂಬುದನ್ನು ಅವಲೋಕಿಸಿ ನ್ಯಾಯಾಲಯ ನಿರ್ಣಯಿಸಬೇಕಾಗುತ್ತದೆ. ಪ್ರಾಸಿಕ್ಯೂಷನ್ ಅವರು ವ್ಯಾಪಕವಾಗಿ ಸುಸ್ಥಾಪಿಸಿದ ಎಲ್ಲ ಕಾನೂನು ಅಗತ್ಯತೆಗಳನ್ನು ಯುಕ್ತವಾಗಿ ನೆರವೇರಿಸಿದ ನಂತರವೇ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.ಆದುದರಿಂದಲೇ ನೀಡಿದ ಮಂಜೂರಾತಿ ಆದೇಶದಲ್ಲಿ ಹಸ್ತಕ್ಷೇಪಮಾಡಲು ಸಾಧ್ಯವಿಲ್ಲ.

30. ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮನವಿ ಸಂಬಂಧದಲ್ಲಿ ಕೆಲವೊಂದು ಕಾನೂನು ಕಾರಣಗಳನ್ನು ನಿರ್ವಹಿಸುವುದಕ್ಕೆ ಕೋರಿರುವರು, ದಂಡ ಪ್ರಕ್ರಿಯಾ ಸಂಹಿತೆಯ 397 ನೇ ಪ್ರಕರಣದ ಅಡಿಯಲ್ಲಿ ಪ್ರತಿಷೇಧಿಸಿದಂತೆ ಮನವಿಯನ್ನು ಸರಿಯಾಗಿ ನಿರ್ವಹಿಸಿಲ್ಲ ಎಂಬ ಕಾರಣಗಳ ಮೇಲೆ ಮತ್ತು ಮುಂದುವರೆದು ಅರ್ಜಿಯಲ್ಲಿ ಆರೋಪಿ ಯಾವುದೇ ನ್ಯಾಯ ವಿಫಲತೆ ಅಥವಾ ಅನ್ಯಾಯವನ್ನು ಸುಸ್ಥಾಪಿಸುವುದಕ್ಕೆ ವಾದವಾಗಲಿ ಅಥವಾ ಸಾಕ್ಷ್ಯವನ್ನು ನೀಡಿರುವುದಿಲ್ಲ.ಆದುದರಿಂದ ಎಲ್ಲಾ ಕಾರಣಗಳ ಮೇಲೆ ಸಹ, ಅರ್ಜಿಯು ವಜಾಗೊಳ್ಳಲು ಹೊಣೆಯಾಗಿದೆ.ನಾನು ಕೆಲ ಇತರೆ ಮೊಕದ್ದಮೆಯಲ್ಲಿನ ಕಾನೂನು ಪ್ರಶ್ನೆಗಳನ್ನು ಪರಿಗಣಿಸಿದ್ದೇನೆ.ಈ ನಿರ್ದಿಷ್ಟ ಮೊಕದ್ದಮೆಯ ಅರ್ಜಿಯ ಸಂಗತಿಗಳು ನನ್ನ ಅಭಿಪ್ರಾಯದಲ್ಲಿ ನಿರ್ವಹಿಸಬಹುದಾದುದು ಆದುದರಿಂದ, ನಾನು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇನೆ.

ಆದೇಶ

ಅರ್ಜಿಯನ್ನು ವಜಾಗೊಳಿಸಲಾಗಿದೆ.